ಸಂಪುಟ : 8 ಸಂಚಿಕೆ :296 ಪುಟ : 4 ಬೆಲೆ : 3.00 ಶುಕ್ರವಾರ ಜನವರಿ 5, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 296 Pages : 4 Price : 3.00 Friday JANUARY 5, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಇಂದಿನ ನೀರು ಪೂರೈಕೆ ವಿವರ

■ **ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ಅವಳಿ ನಗರದಲ್ಲಿ ಜನವರಿ 5ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ :** ವಾರ್ಡ್ ನಂ. 15,16,17 ಶಹಾಪುರ ಪೇಟೆ, ಭಜಂತ್ರಿ ಓಣಿ, ಡಿಸಿ ಮಿಲ್ ರೋಡ್, ಜವಳಗಲ್ಲಿ, ಮೀನಿನ ಮಾರ್ಕೆಟ್ ರೋಡ್, ಮಹೇಂದ್ರಕರ್ ಸರ್ಕಲ್ ಲೈನ್, ಗಾಂಧಿ ಸರ್ಕಲ್ ಲೈನ್, ಕರ್ನಾಟಕ ಟಾಕೀಸ್ ರೋಡ್, ಶುದ್ಧ ನೀರಿನ ಘಟಕದ ಲೈನ್, ಶರಣ ಬಸವೇಶ್ವರ ಗುಡಿ ಲೈನ್, ಗಣೇಶ ಗುಡಿ ಲೈನ್ ಕೆಲವು ಉಳಿದ ಭಾಗಗಳು.

ವಾರ್ಡ್ ನಂ. 7 ಮಲ್ಲೇಶಪ್ಪನ ಲೈನ್, ಪೆಂಡಾರ ಓಣಿ, ನಂದರಗಿ ಲೈನ್, ಅಬ್ಬಿಗೇರಿ ಲೈನ್, ಬಚ್ಚಲಕ್ಕಮನ ಗುಡಿ ಲೈನ್, ಹುಚ್ಚನಗೌಡ್ರ ಓಣಿ, ಚೆನ್ನಗೌಡ್ರ ಓಣಿ ಲೈನ್ ಗಳು. ವಾರ್ಡ್ ನಂ. 22 200-1400 ,1100 ,1600 ಮನೆ ಲೈನ್‌ಗಳು, ದೊಡ್ಡ ಮಸೂತಿ ಭಾಗದ ಉಳಿದ ಭಾಗಗಳು.

ವಾರ್ಡ್ ನಂ. 16, 21 ಕುಂಬಾರ ಓಣಿ, ಕುಷ್ಟರೋಗ ಕಾಲೋನಿ ಭಾಗ -1,2, ಕುಂಬೇಶ್ವರ ನಗರ ಭಾಗ-1,2, ಖಾನ್ ತೋಟ ಕೆಲವು ಉಳಿದ ಭಾಗಗಳು. ವಾರ್ಡ್ ನಂ. 6 ಒಕ್ಕಲಗೇರಿ, ಕಿಲ್ಲಾ, ಗಾರ್ಗಿಪೇಟೆ, ನದಾಫ್ ಗಲ್ಲಿ.

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಗದುಗಿನ ಬೆಳದಡಿಯಲ್ಲಿರುವ 'ಸಜೀವ ಶ್ರೀರಾಮ ಮಂದಿರ' । ಶ್ರೀರಾಮನ ಪಾದಸ್ಪರ್ಶವಾದ ಸ್ಥಳ ಇಲ್ಲಿದೆ

# ಮರ್ಯಾದಾ ಪುರುಷೋತ್ತಮ ಶ್ರೀರಾಮನಿಗೂ ಗದಗ ಜಿಲ್ಲೆಗೂ ಇದೆ ನಂಟು!

■ **ವಿಜಯಸಾಕ್ಷಿ ಸುದ್ದಿ, ಗದಗ**

ಅಸಂಖ್ಯಾತ ಹಿಂದೂ ಬಾಂಧವರ ಆರಾಧ್ಯ ದೇವರು ಶ್ರೀರಾಮಚಂದ್ರ. ಸುದೀರ್ಘ ಹೋರಾಟದ ತರುವಾಯ ಮರ್ಯಾದಾ ಪುರುಷೋತ್ತಮ ಶ್ರೀರಾಮನ ಭವ್ಯವಾದ ಮಂದಿರ ಅಯೋಧ್ಯೆಯಲ್ಲಿ ಸಿದ್ಧವಾಗಿದ್ದು, ಮಂದಿರದ ಉದ್ಘಾಟನೆಗೆ ದಿನಗಣನೆ ಆರಂಭವಾಗಿದೆ, ಸಮಸ್ತ ಭಕ್ತರು ಈ ಅವಿಸ್ಮರಣೀಯ, ಐತಿಹಾಸಿಕ ಕ್ಷಣಕ್ಕಾಗಿ ಎದುರುನೋಡುತ್ತಿದ್ದಾರೆ.

ಹೀಗಿರುವಾಗ, ಪ್ರಭು ಶ್ರೀರಾಮಚಂದ್ರ ಹಾಗೂ ಕರ್ನಾಟಕಕ್ಕೆ ಹಲವು ನಂಟುಗಳಿರುವುದು ಐತಿಹಾಸದಿಂದ ತಿಳಿದುಬರುತ್ತದೆ. ಅಂತೆಯೇ ಪ್ರಭು ಶ್ರೀರಾಮನಿಗೂ ಮುದ್ರಣ ಕಾಶಿ ಗದಗ ಜಿಲ್ಲೆಗೂ ಅವಿನಾಭಾವ ಸಂಬಂಧವಿದೆ



ಎಂದರೆ ಅಚ್ಚರಿಯಾದೀತು. ಮಾತೆ ಸೀತಾ ದೇವಿಯನ್ನರಸಿ ಹೊರಟ ಶ್ರೀರಾಮ



ಈಗಿನ ಬೆಳದಡಿ ಗ್ರಾಮದಿಂದ ಶ್ರೀರಾಮ ಬೈರಾಪುರ ಗ್ರಾಮಕ್ಕೆ ಹೋಗುವಾಗ, ಶ್ರೀರಾಮನ ತಂದೆ ದಶರಥ ಮಹಾರಾಜರು ಸಾವನ್ನಪ್ಪಿರುವ ಸುದ್ದಿ ತಿಳಿದು, ಬೈರಾಪುರದಲ್ಲಿ ಬಾಣ ಹೂಡಿ, ನೀರು ತರಿಸಿ ಮುಂದೆ ಅಲ್ಲಿಂದ ಕಿಷ್ಕಿಂದೆಗೆ ಹೋಗಿದ್ದಾರೆ ಎನ್ನುವ ನಂಬಿಕೆಯಿದೆ. ಕಿಷ್ಕಿಂದೆಯಿಂದ ರಾಮೇಶ್ವರಕ್ಕೆ ಹೋಗಿ ಅಲ್ಲಿಂದ ಲಂಕೆಗೆ ತೆರಳಿ, ಸೀತಾಮಾತೆಯನ್ನು ಕರೆತಂದರು ಎನ್ನುವುದು ಇತಿಹಾಸ.

ಹಾಗೂ ಲಕ್ಷಣ ಗದಗ ತಾಲೂಕಿನ ಬೆಳದಡಿ ಗ್ರಾಮದಲ್ಲಿ ಒಂದು ದಿನ ವಾಸ್ತವ್ಯ ಮಾಡಿ, ಮುಂದೆ ತೆರಳಿದರೆಂಬ ಐತಿಹ್ಯ ಪ್ರಚಲಿತದಲ್ಲಿದ್ದು,

▶▶ 3ನೇ ಪುಟಕ್ಕೆ

## ಬೀದಿ ಬದಿ ಮಕ್ಕಳ ಗುರುತಿಸಲು 'ಬಾಲಸ್ವರಾಜ್' ಪೋರ್ಟಲ್

■ **ವಿಜಯಸಾಕ್ಷಿ ಸುದ್ದಿ, ಗದಗ**

ಬೀದಿ ಬದಿ ಮಕ್ಕಳ ಗುರುತಿಸುವಿಕೆ, ರಕ್ಷಣಾ ಕಾರ್ಯಾಚರಣೆ ಮತ್ತು ಸೂಕ್ತ ಪುನರ್ವಸತಿಗಾಗಿ "ಬಾಲಸ್ವರಾಜ" ಪೋರ್ಟಲ್‌ನ್ನು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ವತಿಯಿಂದ ಅಭಿವೃದ್ಧಿಪಡಿಸಲಾಗಿದೆ. ಮಕ್ಕಳ ರಕ್ಷಣೆ, ಬೀದಿಬದಿ ಮಕ್ಕಳ ಗುರುತಿಸುವಿಕೆ, ರಕ್ಷಣಾ ಕಾರ್ಯಾಚರಣೆ ಮತ್ತು ಪುನರ್ವಸತಿಗೊಳಿಸುವ ಕಾರ್ಯದಲ್ಲಿ ಸಮುದಾಯದ ಸಹಭಾಗಿತ್ವ ಅವಶ್ಯಕವಾಗಿರುವ ಹಿನ್ನಲೆಯಲ್ಲಿ ಆಸಕ್ತ ವೃತ್ತಿಪರರು, ತಜ್ಞರು, ನಾಗರಿಕರು, ಸರಕಾರೇತರ ಸಂಸ್ಥೆಗಳು, ಸಮುದಾಯ ಸೇವಾ ಸಂಸ್ಥೆಗಳು ರಕ್ಷಣೆ ಅವಶ್ಯವಿರುವ ಮಕ್ಕಳಿಗೆ ಸಹಾಯ ಒದಗಿಸಲು 'ಬಾಲಸ್ವರಾಜ್' ಪೋರ್ಟಲ್ ಸಿಟಿಜನ್ ಪೋರ್ಟಲ್ ಲಿಂಕ್ ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನವೀಕೃತ ಲಯನ್ಸ್ ಭವನ ಉದ್ಘಾಟನೆ



■ **ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ಲಯನ್ಸ್ ಕ್ಲಬ್‌ನ ಮುಖ್ಯ ಕಟ್ಟಡದಲ್ಲಿರುವ ನವೀಕೃತ ಲಯನ್ಸ್ ಭವನವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಉದ್ಘಾಟಿಸಿದರು.

ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಕಳೆದ 58 ವರ್ಷಗಳಿಂದ ಸಮಾಜಮುಖಿಯಾಗಿ ಜನಪರ ಕಾರ್ಯಗಳನ್ನು ಮಾಡುತ್ತ ಬಂದಿರುವದನ್ನು ಸಚಿವರು ಶ್ಲಾಘಿಸಿದರು.

ಸಮಾರಂಭದಲ್ಲಿ ಕ್ಲಬ್‌ನ ಮಾಜಿ ಗವರ್ನರ್ ಆನಂದ ಪೋತ್ನೀಸ್, ಮಾಜಿ ಜಿಲ್ಲಾ ಕ್ಯಾಬಿನೆಟ್ ಕಾರ್ಯದರ್ಶಿ ಡಾ.ಜಗದೀಶ ಶಿರೋಳ, ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಅಧ್ಯಕ್ಷ ರಮೇಶ ಶಿಗ್ಲಿ, ಕಾರ್ಯದರ್ಶಿ ಪ್ರವೀಣ ವಾರಕರ, ಆರ್.ಜಿ. ಮೇರವಾಡೆ, ಡಾ. ಶ್ರೀಧರ ಕುರಡಗಿ, ಶಿವಕುಮಾರ ಪಾಟೀಲ, ಸಿದ್ಧಣ್ಣ ಪಾಟೀಲ, ಶರಣು ಶಿಗ್ಲಿ, ವಿಜಯ ಹುಬಳೀಮಠ, ದತ್ತು ಬೇವಿನಕಟ್ಟಿ, ಡಾ.ನವೀನ ಹಿರೇಗೌಡ್ರ ಮುಂತಾದವರಿದ್ದರು.

### ಕೂಸಿನ ಮನೆ ಆರೈಕೆದಾರರ ತರಬೇತಿ ಕಾರ್ಯಾಗಾರ ಉದ್ಘಾಟಿಸಿದ ತಾ.ಪಂ ಇಓ ಕೃಷ್ಣಪ್ಪ ಧರ್ಮರ

# ಮಗುವಿನ ಮಾನಸಿಕ ವಿಕಾಸಕ್ಕೆ ಕೂಸಿನ ಮನೆ ಪೂರಕ

■ **ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಗ್ರಾಮೀಣ ಪ್ರದೇಶದಲ್ಲಿ ಕೂಲಿಕಾರರು ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಅವರ ಮಕ್ಕಳ ಸುರಕ್ಷತೆ ಮತ್ತು ಪೋಷಣೆ ಅಗತ್ಯವಾಗಿದೆ. ಆದ್ದರಿಂದ ಮಕ್ಕಳ ದೈಹಿಕ ಬೆಳವಣಿಗೆ ಮತ್ತು ಮಾನಸಿಕ ವಿಕಾಸದ ಹಿತದೃಷ್ಟಿಯಿಂದ ಕೂಸಿನ ಮನೆ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣಪ್ಪ ಧರ್ಮರ ಹೇಳಿದರು.

ತಾ.ಪಂ ಸಭಾಭವನದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕೂಸಿನ ಮನೆ ಆರೈಕೆದಾರರ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.



ಮುಗ್ಧ ಮಕ್ಕಳೊಂದಿಗೆ ಬೆರೆತು, ಅವರ ಆರೈಕೆ ಮಾಡುವುದು ಮನಸ್ಸಿಗೆ ಸಂತಸ ತರುವ ಕಾರ್ಯವಾಗಿದೆ. ಅಂತಹ ಮಹತ್ತರ ಕಾರ್ಯವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಅನುಷ್ಠಾನಗೊಳಿಸಲಾಗಿದೆ. ಕೂಸಿನ ಮನೆ ಆರೈಕೆದಾರರು ದಾಖಲಾಗುವ ಮಕ್ಕಳ ಆರೈಕೆ, ಲಾಲನೆ, ಪೋಷಣೆಯನ್ನು ಅತ್ಯಂತ ಜಾಗರೂಕತೆಯಿಂದ ನಿರ್ವಹಿಸಬೇಕು. ಮಗುವಿಗೆ ಹಾನಿಯನ್ನುಂಟು ಮಾಡುವ ಸಲಕರಣೆಗಳಿಂದ ದೂರ ಇರಬೇಕು. ನರೇಗಾ ಯೋಜನೆಯಲ್ಲಿ 316 ರೂ.ಗಳಂತೆ ಕೂಲಿ ಪಾವತಿಸಲಾಗುತ್ತದೆ. ಜತೆಗೆ 100 ದಿನ ಕೆಲಸ ಕೂಡ ಸಿಗುವುದರಿಂದ ಆರ್ಥಿಕವಾಗಿ ಮಹಿಳೆಯರು ಸಬಲರಾಗುತ್ತಾರೆ ಎಂದರು.

> ರೋಣ ತಾಲೂಕಿನ ಸಹಾಯಕ ಶಿಶುಪಾಲನಾಧಿಕಾರಿ ಲಲಿತಾ ಅಳವಂಡಿ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರಿಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸಲು ಮತ್ತು ನರೇಗಾ ಯೋಜನೆಯಡಿ ಮಹಿಳೆಯರು ಕೂಲಿ ಕೆಲಸ ನಿರ್ವಹಿಸಲು ಪೂರಕ ವಾತಾವರಣ ಹಾಗೂ ಸೌಕರ್ಯ ಕಲ್ಪಿಸುವುದರೊಂದಿಗೆ ಅವರ ಮಕ್ಕಳ ಆರೋಗ್ಯ, ಪೌಷ್ಟಿಕತೆ ಮತ್ತು ಸುರಕ್ಷತೆಯ ಹಿತದೃಷ್ಟಿಯಿಂದ ಕೂಸಿನ ಮನೆ ಪ್ರಾರಂಭಿಸಲಾಗಿದೆ ಎಂದರು.

ತಾಲೂಕಿನ 13 ಗ್ರಾಮ ಪಂಚಾಯಿತಿಗಳಲ್ಲಿ ಕೂಸಿನ ಮನೆ ಕೇಂದ್ರ ಸ್ಥಾಪಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ತಲಾ 1 ಲಕ್ಷ ರೂ ಅನುದಾನ ಬಿಡುಗಡೆ ಮಾಡಲಾಗಿದೆ ಎಂದರು.

ಜಿಲ್ಲಾ ಪಂಚಾಯತ ಐಇಸಿ ಸಂಯೋಜಕ ವಿ.ಎಸ್. ಸಜ್ಜನ, ತಾ.ಪಂ ಐಇಸಿ ಸಂಯೋಜಕ ವೀರೇಶ ಬಸನಗೌಡ್ರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿಯರಾದ ಎಚ್.ಎಚ್. ಗುಂಡಮ್ಮನವರ, ಜಿ.ಬಿ. ಪಾಟೀಲ, ಗ್ರಾಮ ಕಾಯಕ ಮಿತ್ರರಾದ ಭಾರತಿ ಯಂಗಾಡಿ, ಶಿವವ್ವ ಮಾದರ ಮುಂತಾದವರಿದ್ದರು.

## ಸಮರ್ಪಕವಾಗಿ ಪಡಿತರ ವಿತರಿಸಿ



■ **ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪಡಿತರ ವಿತರಣೆಯಲ್ಲಿ ಯಾವುದೇ ಲೋಪದೋಷವಾಗದಂತೆ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳ ಫಲಾನುಭವಿಗಳಿಗೆ ಸಕಾಲಿಕ ಪಡಿತರ ವಿತರಿಸುವಂತೆ ತಹಸೀಲ್ದಾರ ವಾಸುದೇವ ಸ್ವಾಮಿ ಸೂಚನೆ ನೀಡಿದರು.

ಅವರು ಗುರುವಾರ ಪಟ್ಟಣದ ತಹಸೀಲ್ದಾರ ಕಚೇರಿಯಲ್ಲಿ ನ್ಯಾಯಬೆಲೆ ಅಂಗಡಿ ಮಾಲೀಕರ ಸಭೆ ಕರೆದು ಮಾತನಾಡಿದರು. ಸರ್ಕಾರದ ಆದೇಶದನ್ವಯ ಸರಿಯಾದ ಪ್ರಮಾಣದಲ್ಲಿ ಪಡಿತರ ವಿತರಣೆ ಮಾಡಬೇಕು. ಅನ್ನಭಾಗ್ಯ ಯೋಜನೆಯ ನೇರ ನಗದು ವರ್ಗಾವಣೆಗೆ ಸಂಬಂಧಿಸಿದಂತೆ ಬಾಕಿ ಉಳಿದಿರುವ ಫಲಾನುಭವಿಗಳ ಇ-ಕೆವೈಸಿ ಮತ್ತು ಎನ್‌ಪಿಸಿಐ ಲಿಂಕ್ ಮಾಡಿಸುವಂತೆ ಮಾರ್ಗದರ್ಶನ ನೀಡಬೇಕು. ನಿಗದಿತ ವೇಳೆಯಲ್ಲಿ ನ್ಯಾಯಬೆಲೆ ಅಂಗಡಿ ಕಾರ್ಯಾರಂಭದಲ್ಲಿರಬೇಕು. ಏನಾದರೂ ಸಮಸ್ಯೆಗಳಿದ್ದಲ್ಲಿ ಆಹಾರ ಇಲಾಖೆ ಅಧಿಕಾರಿ ಮತ್ತು ತಹಸೀಲ್ದಾರರ ಗಮನಕ್ಕೆ ತರಬೇಕು ಎಂದರು.

ಈ ವೇಳೆ ಆಹಾರ ನಿರೀಕ್ಷಕ ಜಗದೀಶ ಕುರುಬರ, ನ್ಯಾಯ ಬೆಲೆ ಅಂಗಡಿ ಮಾಲೀಕರಾದ ಬಸವರಾಜ ಪುಟಾಣಿ, ಎಂ.ಎಸ್. ನರಸಮ್ಮನವರ, ಗಿರೀಶ ಚೌರಡ್ಡಿ, ಹಮೀದ ಸೈಕಲ್‌ಗಾರ, ನಿಲೇಶ ಹುಳಕನವರ, ಬಸವರಾಜ ಸಂಶಿ, ಎನ್.ಎಸ್. ಬುರಡಿ ಸೇರಿದಂತೆ ಎಲ್ಲ ನ್ಯಾಯಬೆಲೆ ಅಂಗಡಿ ಮಾಲೀಕರು ಇದ್ದರು.

### ಮಹಿಳೆಯರ ಸಂರಕ್ಷಣಾ ಕಾಯ್ದೆಯ ಅನುಷ್ಠಾನ ಕುರಿತು ತರಬೇತಿ ಕಾರ್ಯಕ್ರಮ

# ಕೌಟುಂಬಿಕ ದೌರ್ಜನ್ಯಗಳಿಂದ ಮಹಿಳೆಯರನ್ನು ಸಂರಕ್ಷಿಸಿ

■ **ವಿಜಯಸಾಕ್ಷಿ ಸುದ್ದಿ, ಗದಗ**

ಕೌಟುಂಬಿಕ ಕಲಹಗಳ ಕಾರಣಕ್ಕೆ ಮಹಿಳೆಯರು ಎದುರಿಸುವ ದೌರ್ಜನ್ಯಗಳಿಂದ ಅವರನ್ನು ಕಾನೂನಿನಡಿ ಸಂರಕ್ಷಿಸುವ ಕೆಲಸವಾಗಬೇಕಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ನುಡಿದರು.

ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪಂಚಾಯತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಗದಗ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ಎ.ಡಿ.ಆರ್ ಕಟ್ಟಡದಲ್ಲಿ ಹಮ್ಮಿಕೊಂಡಿದ್ದ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆಯ ಅನುಷ್ಠಾನ ಕುರಿತ 2 ದಿನದ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಇಂದಿನ ದಿನಗಳಲ್ಲಿ ಕೌಟುಂಬಿಕ ಕಲಹಗಳಿಂದಾಗಿ ಮಹಿಳೆಯರನ್ನು ರಾತ್ರೋ ರಾತ್ರಿ ಹೊರ ಹಾಕುವ ಘಟನೆಗಳು ನಡೆಯುತ್ತಿವೆ. ಇಂತಹ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸಂಬಂಧಿತ ಇಲಾಖೆಗಳಿಗೆ ಒಂದೆಡೆ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ ಅನುಷ್ಠಾನ ಕುರಿತು ಪುನಶ್ಚೇತನ ತರಬೇತಿ ನೀಡುತ್ತಿರುವುದು ಶ್ಲಾಘನೀಯ ಎಂದರು.




ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಂ.ಐ. ಹಿರೇಮನಿಪಾಟೀಲ ಮಾತನಾಡಿ, ಇಂದಿನ ದಿನಮಾನಗಳಲ್ಲಿ ಎಲ್ಲೆಡೆ ಕೌಟುಂಬಿಕ ಕಲಹಗಳು ಹೆಚ್ಚಾಗಿ ಕಂಡುಬರುತ್ತಿವೆ. ಈ ಹಿನ್ನೆಲೆಯಲ್ಲಿ ದೌರ್ಜನ್ಯಕ್ಕೊಳಗಾದವರಿಗೆ ಕಾನೂನು ರೀತ್ಯಾ ನ್ಯಾಯ ದೊರಕಿಸಬೇಕು ಎಂದರು.

> ಕಚೇರಿ ಅಧೀಕ್ಷಕಿ ಸುನೀತಾ ನಾಡಗೇರ ಕಾಯ್ದೆ ಸ್ವರೂಪ ಅನುಷ್ಠಾನಕ್ಕಾಗಿ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳ ಕುರಿತು, ಮಹಿಳಾ ಸಂರಕ್ಷಣಾಧಿಕಾರಿ ರಾಜೇಶ್ವರಿ ಮೇಟಿ ಕಾಯ್ದೆ ಅನುಷ್ಠಾನದಲ್ಲಿ ಸಂರಕ್ಷಣಾಧಿಕಾರಿಗಳ ಪಾತ್ರದ ಕುರಿತು ಹಾಗೂ ವಕೀಲರಾದ ಬಸವರಾಜ ಸಂಶಿ ನ್ಯಾಯಾಲಯಗಳ ಆದೇಶಗಳ ಅನುಷ್ಠಾನ ಹಾಗೂ ದಂಡಾಧಿಕಾರಿಗಳೊಂದಿಗೆ ಸಮನ್ವಯ ಕುರಿತು ಉಪನ್ಯಾಸ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಪರಶುರಾಮ ಶೆಟ್ಟೆಪ್ಪನವರ ಮಾತನಾಡಿ, ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ ಅನುಷ್ಠಾನಕ್ಕೆ ಸಂಬಂಧಿಸಿ, ಎಲ್ಲಾ ಇಲಾಖೆಗಳ ಸಹಕಾರ ಹಾಗೂ ಭಾಗವಹಿಸುವಿಕೆ ಅವಶ್ಯ ಎಂದರು.

ಮುಖ್ಯ ಅತಿಥಿಗಳಾಗಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ. ಗುರುಪ್ರಸಾದ ಪಾಲ್ಗೊಂಡಿದ್ದರು. ವೇದಿಕೆ ಮೇಲೆ ಜಿಲ್ಲಾ ನಿರೂಪಣಾಧಿಕಾರಿಗಳಾದ ರಾಧಾ ಜಿ.ಮಣ್ಣೂರ ಉಪಸ್ಥಿತರಿದ್ದರು.

ಹಿರಿಯ ಮೇಲ್ವಿಚಾರಕರಾದ ಪ್ರಭಾವತಿ ಮುದಿಗೌಡ್ರ ಸ್ವಾಗತಿಸಿದರು.

## ಸಾಕ್ಷಿ ಸುಭಾಷಿತ

ನಿಮ್ಮ ವಿಮೋಚನೆಗೆ ನೀವೇ ದಾರಿ ಕಂಡುಕೊಳ್ಳಬೇಕು. ಅದಕ್ಕಾಗಿ ಬೇರೆಯವರನ್ನು ಅವಲಂಬಿಸಬಾರದು.

–ಬುದ್ಧ

## ಸಂಪಾದಕೀಯ

# ರಷ್ಯಾ ಉಕ್ರೇನ್ ಯುದ್ಧಕ್ಕೆ 2 ವರ್ಷ

ಮೂರನೇ ಮಹಾಯುದ್ಧಕ್ಕೆ ನಾಂದಿ ಎಂದೇ ಬಿಂಬಿತವಾಗಿದ್ದ ರಷ್ಯಾ ಮತ್ತು ಉಕ್ರೇನ ಯುದ್ಧ ಆರಂಭವಾಗಿ ಎರಡು ವರ್ಷ ಸಮೀಪಿಸುತ್ತಿದೆ. ಆದರೂ ಎರಡು ದೇಶಗಳು ಪಟ್ಟು ಸಡಿಲಿಸದೆ ಯುದ್ಧ ಭೂಮಿಯಲ್ಲಿ ನಿಂತಿರುವುದು ನೋಡಿದರೆ ಎರಡು ದೇಶಗಳ ಮಧ್ಯೆ ಶಾಂತಿ ಸ್ಥಾಪಿತವಾಗುವ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ.

2024 ಫೆಬ್ರುವರಿವರೆಗೆ ಯುದ್ಧ ಆರಂಭವಾಗಿ ಎರಡು ವರ್ಷ ಪೂರ್ಣಗೊಳ್ಳಲಿದೆ. ಆರಂಭದ ದಿನಗಳಲ್ಲಿ ಯುದ್ಧ ಕೆಲ ದಿನಗಳಲ್ಲಿ ಮುಗಿಯಲಿದೆ ಎಂದೇ ಭಾವಿಸಲಾಗಿತ್ತು. ರಷ್ಯಾ ತನ್ನ ದಾಳಿಯನ್ನು ತೀವ್ರಗೊಳಿಸುತ್ತಿದ್ದಂತೆ ಯುದ್ಧದ ಚಿತ್ರಣ ಬದಲಾಯಿತು. ಅನೇಕ ದೇಶಗಳು ಉಕ್ರೇನ್ ಪರ ಬೆಂಬಲ ವ್ಯಕ್ತಪಡಿಸಿದ್ದವು. ರಾಜಕೀಯ ಕಾರಣಗಳಿಂದಾಗಿ ಎರಡು ದೇಶಗಳ ನಡುವಿನ ಯುದ್ಧ ಮೂರನೇ ಮಹಾಯುದ್ಧಕ್ಕೆ ಕಾರಣವಾಗಲಿದೆ ಎಂದೇ ಅಂದಾಜಿಸಲಾಗಿತ್ತು.

ಮೂರನೇ ಮಹಾಯುದ್ಧದ ಭೀತಿಯ ಮಧ್ಯೆಯೂ ಎರಡು ದೇಶಗಳು ಯುದ್ಧದಲ್ಲಿ ನಿರತವಾದವು. ಅನೇಕ ರಾಷ್ಟ್ರಗಳು ಮಾನವೀಯ ನೆರವು ನೀಡಿದ್ದು ಬಿಟ್ಟರೆ, ಮಿಲಿಟರಿ ನೆರವು ನೀಡಲಿಲ್ಲ. ಆ ಕಾರಣಕ್ಕಾಗಿ ಯುದ್ಧ ಎರಡು ದೇಶಕ್ಕಷ್ಟೇ ಸೀಮಿತವಾಯಿತು. ಆದರೂ ಶಾಂತಿ ಮಾತ್ರ ಸ್ಥಾಪಿತವಾಗಲಿಲ್ಲ.

ಪ್ರತಿ ಯುದ್ಧದ ಅಂತ್ಯ ಶಾಂತಿ ಸ್ಥಾಪನೆಯ ಉದ್ದೇಶ ಹೊಂದಿರುತ್ತದೆ. ಅಂತಹ ಒಂದು ಸಣ್ಣ ಸುಳಿವು ಈಗ ಎರಡು ದೇಶಗಳಿಂದ ಸಿಗುತ್ತಿದೆ. ಪರಸ್ಪರ ಯುದ್ಧ ಕೈದಿಗಳನ್ನ ಬಿಡುಗಡೆಗೊಳಿಸುವ ನಿರ್ಧಾರಕ್ಕೆ ಬಂದಿವೆ. ಸುಮಾರು 200ಕ್ಕೂ ಹೆಚ್ಚು ಸೈನಿಕರು ಅಧಿಕಾರಿಗಳು ಮತ್ತು ಸಾರ್ವಜನಿಕರನ್ನ ಆ ಎರಡು ದೇಶಗಳು ಬಿಡುಗಡೆಗೊಳಿಸಿರುವುದು, ಯುದ್ಧ ಕೊನೆಗಾಣುವ ಸೂಚನೆಯನ್ನು ನೀಡಿದೆ.

ಸದ್ಯ ಯುದ್ಧಕ್ಕೆ ಕಾರಣಗಳು ಏನು ಎನ್ನುವ ಬಗ್ಗೆ ಸುದೀರ್ಘ ಚಿಂತನೆ ನಡೆಸುವುದಕ್ಕಿಂತ ಯುದ್ಧವನ್ನು ಹೇಗೆ ಕೊನೆಗಾಣಿಸಬೇಕು ಎನ್ನುವ ಕುರಿತು ಚಿಂತನೆ ನಡೆಸಬೇಕಾಗಿದೆ. ಎರಡು ದೇಶದ ಮುಖ್ಯಸ್ಥರು ತಮ್ಮ ತಮ್ಮ ದೇಶದ ಜನಸಾಮಾನ್ಯರ ಬದುಕನ್ನ ಕಟ್ಟಿಕೊಳ್ಳಲು ನೆರವಾಗುವುದಕ್ಕಾದರೂ ಯುದ್ಧವನ್ನ ನಿಲ್ಲಿಸಬೇಕಾಗಿದೆ.

## ಕೆಲವೇ ಕ್ಷಣಗಳಲ್ಲಿ ಇಡೀ ಪಟ್ಟಣವನ್ನೇ ಆಪೋಶನ ತೆಗೆದುಕೊಂಡ ಚಂಡಮಾರುತ

# ಹೀಗೊಂದು ಸ್ಥಳವಿದೆ, 'ಪ್ರೇತ ಪಟ್ಟಣ!'

ತಲೆಬರಹ ಓದುತ್ತಿದ್ದಂತೆ ಅಚ್ಚರಿಯಾಗಿರಬಹುದಲ್ಲ? ಈ ಜಗತ್ತು ಎಂದಿಗೂ ಸೋಜಿಗದ ಸಂತೆ. ಇಲ್ಲಿಯ ಅಚ್ಚರಿಗಳಿಗೆ ಎಣೆಯಿಲ್ಲ. ಒಂದೊಂದು ಸ್ಥಳವೂ ಒಂದೊಂದು ವಿಶೇಷತೆಗಳಿಂದ ಹೆಸರಾಗಿಬಿಡುತ್ತದೆ ಮತ್ತು ಅಷ್ಟೇ ಬೇಗ ಹಳೆಯದಾಗಿಬಿಡುತ್ತದೆ ಕೂಡ. ಯಾಕೆಂದರೆ, ಅದಕ್ಕಿಂತಲೂ ಹೆಚ್ಚು ಅಚ್ಚರಿ ಮೂಡಿಸುವ ಇನ್ನಾವುದೋ ಒಂದು ಸ್ಥಳದ ಉದಯ, ಅನ್ವೇಷಣೆಯಾಗಿರುತ್ತದೆ. ಆದರೆ, ಈಗ ಹೇಳ ಹೊರಟಿರುವ ಸ್ಥಳ ಮಾತ್ರ ಎಂದೆಂದಿಗೂ ಪ್ರೇತ ಪಟ್ಟಣವೇ! ಯಾಕೆಂದರೆ, ಅದೊಂದು ಸಂದರ್ಭದಲ್ಲಿ ಸಂಭವಿಸಿದ ಅವಘಡ ಇಡಿಯ ಪಟ್ಟಣವನ್ನೇ ನೆಲಸಮ ಮಾಡಿಬಿಟ್ಟಿತ್ತು. ಹಿಂದಿನಿಂದಲೂ ಅದೊಂದು ಜಾಗವನ್ನು ನೋಡಿ, ಮೆಚ್ಚಿ, ಆನಂದಿಸುತ್ತಿದ್ದವರೆಲ್ಲ ನಂತರದ ದಿನಗಳಲ್ಲಿ ಆ ಜಾಗವನ್ನು ನೋಡಿ ಅಕ್ಷರಶಃ ಆಘಾತಕ್ಕೊಳಗಾಗಿಬಿಟ್ಟಿದ್ದರು.



ಅಂದಹಾಗೆ, ಈ ಸ್ಥಳ 'ಧನುಷ್ಕೋಡಿ'. ಒಂದು ಕಡೆ ಹಿಂದೂ ಮಹಾಸಾಗರ, ಮತ್ತೊಂದೆಡೆ ಬಂಗಾಳಕೊಲ್ಲಿಯಿಂದ ಸುತ್ತುವರೆದಿರುವ ಧನುಷ್ಕೋಡಿ ಒಂದು ಕಾಲದಲ್ಲಿ ಸದಾ ಜನಜಂಗುಳಿಯಿಂದ ಗಿಜಿಗುಡುವ ಮತ್ತು ಅಭಿವೃದ್ಧಿ ಹೊಂದುತ್ತಿರುವ ಪಟ್ಟಣ. ಮನೆಗಳು, ಶಾಲೆಗಳು, ಚರ್ಚ್, ದೇವಾಲಯ, ಅಂಚೆ ಕಚೇರಿ, ರೈಲ್ವೆ ನಿಲ್ದಾಣಗಳೊಂದಿಗೆ ದೇಶದ ಶ್ರೀಮಂತ ಮೀನುಗಾರಿಕಾ ವಲಯಗಳಲ್ಲಿ ಒಂದೆಂದು ಕರೆಯಲ್ಪಡುವ ಈ ಸಣ್ಣ ಪಟ್ಟಣದಲ್ಲಿ ಸಾವಿರಾರು ಜನರ ವಾಸವೂ ಇತ್ತು. ಇದಕ್ಕೂ ಮಿಗಿಲಾಗಿ, ಇದು ಶ್ರೀಲಂಕಾ ಮತ್ತು ಭಾರತದ ನಡುವಿನ ಏಕೈಕ ಭೂ ಗಡಿಯಾಗಿತ್ತು. ಹಲವಾರು ಯಾತ್ರಾರ್ಥಿಗಳು ಮತ್ತು ವ್ಯಾಪಾರಿಗಳಿಗೆ ಪ್ರಮುಖ ಬಂದರಾಗಿ ಕಾರ್ಯನಿರ್ವಹಿಸಿತ್ತು.

ತಮಿಳುನಾಡಿನ ಪಂಬನ್ ದ್ವೀಪದ (ರಾಮೇಶ್ವರಂ ದ್ವೀಪ) ಆಗ್ನೇಯ ತುದಿಯಲ್ಲಿರುವ ಧನುಷ್ಕೋಡಿ 1964ರಲ್ಲಿ ಚಂಡಮಾರುತದ ನಂತರ ಸಂಪೂರ್ಣ ನಾಶವಾಗಿಬಿಟ್ಟಿತು. ಡಿಸೆಂಬರ್ 22, 1964ರಂದು 170 ಮೈಲಿ ವೇಗದಲ್ಲಿ ಬೀಸಿದ ಚಂಡಮಾರುತ ಧನುಷ್ಕೋಡಿ ಪಟ್ಟಣವನ್ನು ಸಂಪೂರ್ಣವಾಗಿ ಆಹುತಿ ಪಡೆದುಬಿಟ್ಟಿತ್ತು. ನೋಡನೋಡುತ್ತಿದ್ದಂತೆ ಎಲ್ಲವೂ ಸ್ಮಶಾನ. ಸುಮಾರು 1,800 ಜನರು ಪ್ರಾಣ ಕಳೆದುಕೊಂಡರು. ಪಟ್ಟಣದ ಎಲ್ಲಾ ಮನೆಗಳು ನೆಲಸಮವಾದವು.

ನಂತರದ ಕೆಲವೇ ದಿನಗಳಲ್ಲಿ ಇಡೀ ಪಟ್ಟಣ ಕೇವಲ ಅವಶೇಷಗಳಿಂದ ತುಂಬಿಹೋಯಿತು. ಎಲ್ಲಿಯೂ ಮನುಷ್ಯರ ಓಡಾಟವಿಲ್ಲ. ಬಂದರಿನಲ್ಲಿ ಹಡಗುಗಳ ಸದ್ದಿಲ್ಲ. ಮದ್ರಾಸ್ ಸರ್ಕಾರ ಕೆಲವೇ ದಿನಗಳಲ್ಲಿ ಈ ಪಟ್ಟಣವನ್ನು 'ಮಾನವ ವಾಸಕ್ಕೆ ಯೋಗ್ಯವಲ್ಲ' ಎಂದು ಘೋಷಿಸಿಬಿಟ್ಟಿತು. ಆದರೂ, ಆ ಚಂಡಮಾರುತದ ಹೊಡೆತದಿಂದ ಬದುಕುಳಿದ ಬೆರಳೆಣಿಕೆಯ ಸ್ಥಳೀಯ ಮೀನುಗಾರರು ಅಳಿದುಳಿದ ಅವಶೇಷಗಳಡಿ ಒಂದಿಷ್ಟು ಅಗತ್ಯ ಸಾಮಗ್ರಿಗಳೊಂದಿಗೆ ಮತ್ತೆ ಅದೇ ಜಾಗದಲ್ಲಿ ಗುಡಿಸಲು ಕಟ್ಟಿ ವಾಸಿಸತೊಡಗಿದ್ದರು.

ಪಟ್ಟಣದ ದೂರದ ಸ್ಥಳ ಮತ್ತು ದುರಂತ ಭೂತಕಾಲ ಈ ಸ್ಥಳಕ್ಕೆ ಒಂದು ವಿಲಕ್ಷಣ ಕಂಪನವನ್ನು ನೀಡುತ್ತಿದೆ. ಆದ್ದರಿಂದ ಇದನ್ನು ಹೆಚ್ಚಾಗಿ 'ಪ್ರೇತ ಪಟ್ಟಣ' ಎಂದೇ ಕರೆಯಲಾಗುತ್ತದೆ. ಒಂದು ಕಾಲದಲ್ಲಿ ಸಮೃದ್ಧವಾಗಿದ್ದ ಪಟ್ಟಣವನ್ನು ನೆನಪಿಸುವ ಅವಶೇಷಗಳು ಮಾತ್ರ ಉಳಿದಿವೆ. ದುರಂತ ಘಟನೆಯ 54 ವರ್ಷಗಳ ನಂತರ, ಧನುಷ್ಕೋಡಿ ಪಟ್ಟಣವೀಗ ನಿಧಾನವಾಗಿ ಜೀವಂತವಾಗುತ್ತಿದೆ. ಧೈರ್ಯವಂತ ಪ್ರವಾಸಿಗರು ನಿಧಾನವಾಗಿ ಪ್ರೇತ ಪಟ್ಟಣಕ್ಕೆ ಭೇಟಿ ನೀಡತೊಡಗಿದರು. ಇಲ್ಲಿನ ಪ್ರಶಾಂತ ವಾತಾವರಣ, ಸಮುದ್ರದ ಅಲೆಗಳ ಸದ್ದು, ಮೃದುವಾದ ಬಿಳಿ ಮರಳು ಮತ್ತು ಸಮುದ್ರ ತೀರದ ಹಳೆಯ ನೆನಪಿನ ಅವಶೇಷಗಳು ಪ್ರವಾಸಿಗರನ್ನು ಈಗಲೂ ಆಕರ್ಷಿಸುತ್ತವೆ.

ಧನುಷ್ಕೋಡಿಗೆ ನೇರ ಸಂಪರ್ಕವಿಲ್ಲ. ಮೊದಲು ರಾಮೇಶ್ವರಂ ತಲುಪಬೇಕು. ಇದು ಧನುಷ್ಕೋಡಿಯಿಂದ ಸುಮಾರು 12 ಮೈಲಿ ದೂರದಲ್ಲಿದೆ. ರಾಮೇಶ್ವರಂ ದಕ್ಷಿಣ ಭಾರತದ ಪ್ರಮುಖ ನಗರಗಳಾದ ತಿರುಚ್ಚಿ, ಚೆನ್ನೈ, ತಂಜಾವೂರು ಮತ್ತು ಕೊಯಮತ್ತೂರಿನಿಂದ ರೈಲು ಮೂಲಕ ಉತ್ತಮ ಸಂಪರ್ಕ ಹೊಂದಿದೆ. ಅಥವಾ, ರಾಮೇಶ್ವರಂನಿಂದ ಸುಮಾರು 3.5 ಗಂಟೆಗಳ ಪ್ರಯಾಣದ ಅಂತರದಲ್ಲಿರುವ ಮಧುರೈಗೆ ವಿಮಾನದಲ್ಲಿ ತೆರಳಬೇಕು. ಅಲ್ಲಿಂದ, ಧನುಷ್ಕೋಡಿಗೆ ಕರೆದೊಯ್ಯುವ ಟೆಂಪೊ-ಸಣ್ಣ ಟ್ರಕ್‌ಗಳನ್ನು ಏರಬೇಕು. ಎರಡೂ ಬದಿಗಳಲ್ಲಿ ಸಮುದ್ರವನ್ನು ಹೊಂದಿರುವ ತೆಳುವಾದ ಭೂಮಿಯ ಮೂಲಕ ಪ್ರಯಾಣಿಸುವ ಅನುಭವ ಎಂದೆಂದಿಗೂ ಇಂಥವೆಲ್ಲ ಅನುಭವಗಳಿಗೆ ತೆರೆದುಕೊಳ್ಳಲು ಇಷ್ಟಪಡುವ ಪ್ರವಾಸಿಗರಿಗಂತೂ ಧನುಷ್ಕೋಡಿ ಸ್ವರ್ಗವೆನಿಸಿಬಿಡುತ್ತದೆ.

ಪುರಾಣಗಳ ಪ್ರಕಾರ, ಭಗವಾನ್ ರಾಮ ಮತ್ತು ಅವನ ಸೈನ್ಯವು ರಾಕ್ಷಸ ರಾಜ ರಾವಣನ ಹಿಡಿತದಿಂದ ತನ್ನ ಪತ್ನಿ ಸೀತೆಯನ್ನು ರಕ್ಷಿಸಲು ರಾಮೇಶ್ವರಂ ದ್ವೀಪ (ತಮಿಳುನಾಡು) ಮತ್ತು ಮನ್ನಾರ್ ದ್ವೀಪ(ಶ್ರೀಲಂಕಾ)ವನ್ನು ಸಂಪರ್ಕಿಸುವ ಸಮುದ್ರಕ್ಕೆ ಅಡ್ಡಲಾಗಿ ರಾಮ ಸೇತುವನ್ನು ನಿರ್ಮಿಸಿದ ಸ್ಥಳವಾಗಿದೆ. ತನ್ನ ಹೆಂಡತಿಯನ್ನು ರಕ್ಷಿಸಿದ ನಂತರ, ಭಗವಾನ್ ರಾಮನು ವಿಭೀಷಣನ (ಹೊಸ ಲಂಕಾ ರಾಜ) ಕೋರಿಕೆಯ ಮೇರೆಗೆ ತನ್ನ ಬಾಣಗಳಿಂದ ಸೇತುವೆಯನ್ನು ನಾಶಪಡಿಸಿದ. ಹೀಗಾಗಿ ಪಟ್ಟಣದ ಹೆಸರು 'ಧನುಷ್ಕೋಡಿ' ಎಂದು ಮಾರ್ಪಟ್ಟಿತು ಎಂಬ ಉಲ್ಲೇಖವಿದೆ.

# ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

■ವಿಜಯಸಾಕ್ಷಿ ಸುದ್ದಿ, ಧಾರವಾಡ

2024-25ನೇ ಸಾಲಿಗಾಗಿ ಸಮಾಜ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚನ್ನಮ್ಮಾ, ಡಾ. ಬಿ.ಆರ್. ಅಂಬೇಡ್ಕರ, ಇಂದಿರಾ ಗಾಂಧಿ ಮತ್ತು ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಜನವರಿ 6, 2024ರವರೆಗೆ ವಿಸ್ತರಿಸಲಾಗಿದೆ.

ಆಸಕ್ತರು ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚನ್ನಮ್ಮಾ, ಡಾ. ಬಿ.ಆರ್. ಅಂಬೇಡ್ಕರ, ಇಂದಿರಾ ಗಾಂಧಿ, ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು ಮಗುವಿನ ಇತ್ತೀಚಿನ ಭಾವಚಿತ್ರ, ಮಗುವಿನ ಎಸ್‌ಎಟಿಎಸ್ (SATS) ನಂಬರ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಲಗತ್ತಿಸಬೇಕು ಹಾಗೂ ಪ.ಜಾತಿ ಪ.ಪಂಗಡ ಹೊರತುಪಡಿಸಿ ಉಳಿದ ವರ್ಗದವರು ಸಲ್ಲಿಸುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು ಕಡ್ಡಾಯವಾಗಿ ಪ್ರಸ್ತುತ ವರ್ಷದ್ದಿರಬೇಕು. ಮಗುವಿನ ಆಧಾರ ಕಾರ್ಡ್ ಝರಾಕ್ಸ್, ವಿಶೇಷ ಮೀಸಲಾತಿ ಕೋರುವ ಪ್ರಮಾಣ ಪತ್ರಗಳು, ಪಡಿತರ ಚೀಟಿಯ ಝರಾಕ್ಸ್ ಪತ್ರಿಯೊಂದಿಗೆ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ-0836-2447201 ಹಾಗೂ http:/kea.kar.nic.in http://kreis.kar.nic.in ಜಾಲತಾಣವನ್ನು ಸಂಪರ್ಕಿಸಬಹುದೆಂದು ಸಮಾಜ ಕಲ್ಯಾಣ ಇಲಾಖೆ ಅಪರ ನಿರ್ದೇಶಕ ಅಲ್ಲಾಬಕಾಷ ಎಂ.ಎಸ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆಸ್ಪತ್ರೆಗಳಲ್ಲಿ ಕೋವಿಡ್ ಮುನ್ನೆಚ್ಚರಿಕೆ ಡೋಸ್ ಲಭ್ಯ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ಭಾರತ ಸರ್ಕಾರದ ಮಾರ್ಗ ಸೂಚಿಯಂತೆ ಕಾರ್ಬಿವ್ಯಾಕ್ಸ್ ಲಸಿಕೆಯನ್ನು (ಹೆಟಿರೊಲಾಗಸ್) ಮುನ್ನೆಚ್ಚರಿಕೆ ಡೋಸ್ ಆಗಿ ನೀಡಬಹುದಾಗಿದೆ. ಆದ್ದರಿಂದ ಕೋವಿಶೀಲ್ಡ್ ಅಥವಾ ಕೋವ್ಯಾಕ್ಸಿನ್ ಲಸಿಕೆಯ 2ನೇ ಡೋಸ್ ಪಡೆದು 6 ತಿಂಗಳುಗಳು ಅಥವಾ 26 ವಾರಗಳನ್ನು ಪೂರೈಸಿದ 18 ವರ್ಷ ಮೇಲ್ಪಟ್ಟವರು, ಮುನ್ನೆಚ್ಚರಿಕೆ ಡೋಸ್ ಪಡೆಯದ 60 ವರ್ಷ ಮೇಲ್ಪಟ್ಟವರು, ಕಡಿಮೆ ರೋಗ ನಿರೋಧಕ ಶಕ್ತಿ



ಇರುವವರು ಮತ್ತು ಆರೋಗ್ಯ ಕಾರ್ಯಕರ್ತರು ಕೋವಿಡ್ ಲಸಿಕಾಕರಣದ ಮಾರ್ಗಸೂಚಿಯ ಪ್ರಕಾರ ಮುನ್ನೆಚ್ಚರಿಕೆ ಡೋಸ್ ಪಡೆಯಬಹುದಾಗಿದೆ.

ಧಾರವಾಡದ ಜಿಲ್ಲಾ ಆಸ್ಪತ್ರೆ, ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆ ಮತ್ತು ಕಲಘಟಗಿ, ಕುಂದಗೋಳ ಹಾಗೂ ನವಲಗುಂದ ತಾಲೂಕಾ ಆಸ್ಪತ್ರೆಗಳಲ್ಲಿ ಕಾರ್ಬಿವ್ಯಾಕ್ಸ್ ಲಸಿಕೆ ಲಭ್ಯವಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆಯಬಹುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಪಾಟೀಲ ಶಶಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಷ್ಟ್ರ ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಸಾಧನೆ



■ವಿಜಯಸಾಕ್ಷಿ ಸುದ್ದಿ, ಧಾರವಾಡ

ಮಧ್ಯಪ್ರದೇಶದ ವಿದೇಶಾ ಜಿಲ್ಲೆಯ ಪಟ್ಟಣದಲ್ಲಿ ಇತ್ತೀಚೆಗೆ ನಡೆದ ರಾಷ್ಟ್ರ ಮಟ್ಟದ ಶಾಲಾ ಬಾಲಕರ ಹಾಗೂ ಬಾಲಕಿಯರ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ 14ರಿಂದ 17 ವರ್ಷ ವಯೋಮಿತಿ ಒಳಗಿನ ವಿಭಾಗದಲ್ಲಿ ಧಾರವಾಡ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದ ಕ್ರೀಡಾ ವಸತಿ ಶಾಲೆಯ ಕ್ರೀಡಾಪಟುಗಳು ಪಂದ್ಯಾವಳಿಯಲ್ಲಿ ಭಾಗವಹಿಸಿ ವಿಜೇತರಾಗಿದ್ದಾರೆ.

33 ಕೆ.ಜಿಯಲ್ಲಿ ಪ್ರಭಾವತಿ ಲಂಗೋಟಿ, 39 ಕೆ.ಜಿಯಲ್ಲಿ ಜಾನ್ವಿ ಕೆ. ದ್ವಿತೀಯ ಸ್ಥಾನ ಹಾಗೂ 42 ಕೆ.ಜಿಯಲ್ಲಿ ಪುಷ್ಪ ನಾಯಕ ತೃತೀಯ ಸ್ಥಾನ ಪಡೆದಿದ್ದಾರೆ. ಬಜರಂಗಿ ದೊಡ್ಡಮನಿ, ಯಂಕಪ್ಪ ಕೂಡಿಗಿ ಈ ಇಬ್ಬರು ಕುಸ್ತಿಪಟುಗಳು ಭಾಗವಹಿಸಿದ್ದರು. ಕ್ರೀಡಾ ಇಲಾಖೆಯ ಕುಸ್ತಿ ತರಬೇತುದಾರ ಶಿವಪ್ಪ ಎಸ್.ಪಾಟೀಲ್ ತರಬೇತಿ ನೀಡಿದ್ದರು.

# ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ನೆಹರು ಯುವ ಕೇಂದ್ರದ ವತಿಯಿಂದ ನನ್ನ ಭಾರತ-ವಿಕಸಿತ ಭಾರತ@2047 ಎಂಬ ವಿಷಯ ಕುರಿತು ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗುತ್ತಿದೆ.

ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದವರನ್ನು ರಾಜ್ಯ ಮಟ್ಟಕ್ಕೆ ಕಳುಹಿಸಲಾಗುವುದು ಹಾಗೂ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದವರಿಗೆ ರೂ. 1 ಲಕ್ಷ, ದ್ವಿತೀಯ ಸ್ಥಾನಕ್ಕೆ ರೂ.50 ಸಾವಿರ ಹಾಗೂ ತೃತೀಯ ಸ್ಥಾನಕ್ಕೆ 25 ಸಾವಿರ ರೂ.ನಗದು ಬಹುಮಾನ ನೀಡಲಾಗುವುದು.

ಸ್ಪರ್ಧೆಯ ನಿಯಮಗಳಿಗೆ ಅನುಗುಣವಾಗಿ, ಸ್ಪರ್ಧೆಯಲ್ಲಿ ಭಾಗವಹಿಸುವವರು ಧಾರವಾಡ ಜಿಲ್ಲೆಯ ನಿವಾಸಿಗಳಾಗಿರಬೇಕು. ವಯಸ್ಸು 15ರಿಂದ 29 (1ನೇ ಜನವರಿ 2024ಕ್ಕೆ) ವರ್ಷದೊಳಗಿರಬೇಕು. ಕನ್ನಡ, ಹಿಂದಿ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಮಾತನಾಡಬೇಕು. ಭಾಷಣದ ಕಾಲಾವಕಾಶ 7 ನಿಮಿಷ ಮಾತ್ರ ಇರುತ್ತದೆ.

ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುಲು ಇಚ್ಛಿಸುವವರು ಜ.6,ರೊಳಗಾಗಿ ಧಾರವಾಡ ನಗರದ ಮಿನಿ ವಿಧಾನಸೌಧದಲ್ಲಿ ಇರುವ ನೆಹರು ಯುವ ಕೇಂದ್ರದ ಕಚೇರಿಯಲ್ಲಿ ಅರ್ಜಿಗಳನ್ನು ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ದೂ-0836-2971379, 9743634525 ಸಂಪರ್ಕಿಸಬಹುದೆಂದು ನೆಹರು ಯುವ ಕೇಂದ್ರದ ಜಿಲ್ಲಾ ಯುವ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಹೊಸ ವರ್ಷಾಚರಣೆ



■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಕಳೆದ ವರ್ಷದಲ್ಲಿಯ ಕಹಿ ನೆನೆಪುಗಳನ್ನು ಮರೆತು ಸಂತಸದ ದಿನಗಳನ್ನು ಮಾತ್ರ ನೆನೆಪಿಸುತ್ತಾ, ಮನಸ್ಸನ್ನು ಭಗವಂತನ ಕಡೆಗೆ ಹರಿಸುವುದೇ ಸತ್ಯವಾದ ಹೊಸ ವರ್ಷಾಚರಣೆಯಾಗಿದೆ ಎಂದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ಬಿ.ಕೆ ಜಯಂತಿ ಅಕ್ಕನವರು ಹೇಳಿದರು.

ಇಲ್ಲಿಯ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಶಾಖೆಯಲ್ಲಿ ಹಮ್ಮಿಕೊಂಡಿದ್ದ ಹೊಸ ವರ್ಷಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇಹದ ಸುಖಕ್ಕಾಗಿ ಅನ್ನ, ಬಟ್ಟೆ, ಮನೆ, ಆಸ್ತಿಗಳನ್ನು ವ್ಯವಸ್ಥೆ ಮಾಡಿಕೊಳ್ಳುತ್ತೇವೆ. ಆದರೆ ಈ ದೇಹದಲ್ಲಿ ಆತ್ಮವೂ ಇದೆ ಎಂಬುದನ್ನು ಮರೆತು ನಿತ್ಯ ದೇಹದ ಸೌಂದರ್ಯ ಬಗ್ಗೆಯೇ ಕಾಳಜಿ ವಹಿಸುತ್ತೇವೆ. ನೂತನ ವರ್ಷದಲ್ಲಿ ನಿತ್ಯ 24 ನಿಮಿಷವಾದರೂ ಭಗವಂತನ ಮಹಾ ವಾಕ್ಯವನ್ನು ಆಲಿಸಿ ಯೋಗವನ್ನು ಮಾಡಬೇಕು. ಇದರಿಂದ ದಿನ ನಿತ್ಯ ಖುಷಿಯಾಗಿ ಇರಬಹುದು ಎಂದರು.

ಇದೇ ಸಂದರ್ಭದಲ್ಲಿ ನೂತನ ವರ್ಷದ ಪಾಕೆಟ್ ಕ್ಯಾಲೆಂಡರನ್ನು ಬಿಡುಗಡೆ ಮಾಡಲಾಯಿತು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಶಾಖೆಯ ಸಂಚಾಲಕಿ ಬಿ.ಕೆ ಸರೋಜಕ್ಕ ಅವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ಸಣ್ಣ ಹೂಡಿಕೆದಾರರ ಜಾಗೃತಿ ಕಾರ್ಯಾಗಾರ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಅತೀ ಬೇಗ ಮತ್ತು ಹೆಚ್ಚು ಲಾಭದ ದೃಷ್ಟಿಯಿಂದ ಜನರು ನಕಲಿ ಕಂಪನಿಗಳಲ್ಲಿ ಹಣವನ್ನು ಹೂಡಿಕೆ ಮಾಡಬಾರದು. ಕಂಪನಿಗಳಲ್ಲಿ ಹಣವನ್ನು ಹೂಡಿಕೆ ಮಾಡುವಾಗ ಜನರು ಬಹಳ ಎಚ್ಚರಿಕೆಯಿಂದ ಇರಬೇಕು ಎಂದು ಗದುಗಿನ ರವಿ ಹುಚ್ಚಣ್ಣನವರು ಹೇಳಿದರು.

ನಗರದಲ್ಲಿ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಗುರುವಾರ ಭಾರತೀಯು ಷೇರು ವಿನಿಮಯ ನಿಯಂತ್ರಣ ಮಂಡಳಿ(ಸೆಬಿ), ಕಾಲೇಜಿನ ಅಂತರಿಕ ಭರವಸೆ ಕೋಶ, ಉದ್ಯೋಗ ಕೋಶ ಮತ್ತು ವಾಣಿಜ್ಯಶಾಸ್ತ್ರ ವಿಭಾಗದ ಸಹಯೋಗದಲ್ಲಿ ಹಮ್ಮಿಕೊಂಡ ಸಣ್ಣ ಹೂಡಿಕೆದಾರರ ಜಾಗೃತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.




ಜನರು ಹಣವನ್ನು ಹೂಡಿಕೆ ಮಾಡುವಾಗ ಕಂಪನಿಗಳ ಹಿನ್ನೆಲೆಯನ್ನು ಮತ್ತು ಅದರ ಕುರಿತು ಸಂಪೂರ್ಣ ಮಾಹಿತಿಯನ್ನು ತಿಳಿದುಕೊಳ್ಳಬೇಕು.

ಹಣ ಹೂಡಿಕೆದಾರರ ರಕ್ಷಣೆಯನ್ನು ಸೆಬಿಯು ಮಾಡುತ್ತದೆ. ಕಂಪನಿಗಳು ದಿವಾಳಿಯಾಗುತ್ತವೆ ಎಂಬ ಭಯದಿಂದ ಜನರು ಹಣವನ್ನು ಹೂಡಿಕೆ ಮಾಡುವುದಕ್ಕೆ ಹಿಂಜರಿಯುತ್ತಿದ್ದಾರೆ ಎಂದು ತಿಳಿಸಿದರು.

ಕಾಲೇಜಿನ ಅಂತರಿಕ ಭರವಸೆ ಕೋಶದ ಸಂಚಾಲಕ ವಿಠೋಬ ಅವರು ಮಾತನಾಡಿ, ನಿಮ್ಮ ಪಾಲಕರಿಗೆ ಹಣದ ಹೂಡಿಕೆ ಕುರಿತು ತಿಳುವಳಿಕೆ ಮೂಡಿಸಬೇಕು. ನೀವು ಅನಗತ್ಯವಾಗಿ ಹಣವನ್ನು ಖರ್ಚು ಮಾಡಬಾರದು. ಸೆಬಿಯು ಹೂಡಿಕೆದಾರರ ಸಂಪೂರ್ಣವಾದ ಜವಬ್ದಾರಿಯನ್ನು ತೆಗೆದು ಕೊಳ್ಳುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯ ಡಾ. ಗಣಪತಿ ಲಮಾಣಿ, ವಿದ್ಯಾರ್ಥಿ ದೆಸೆಯಿಂದಲೇ ಹಣವನ್ನು ಸಂಪಾದನೆ ಮಾಡುವುದನ್ನು ಕಲಿಯಬೇಕು. ಹಣವನ್ನು ಅನಾವಶ್ಯವಾಗಿ ವೆಚ್ಚ ಮಾಡಬಾರದು ಎಂದು ಹೇಳಿದರು.

ವೇದಿಕೆಯಲ್ಲಿ ಉದ್ಯೋಗ ಕೋಶದ ಸಂಚಾಲಕ ಡಾ. ಅಶೋಕ ಕುಮಾರ, ಡಾ. ನರಸಿಂಹ, ಸುಮಿತ್ರಾ ಇದ್ದರು. ಗೀತಾ ಪ್ರಾರ್ಥಿಸಿದರು. ಸುಮಿತ್ರಾ ನಿರೂಪಿಸಿದರು. ವಿಠೋಬ ವಂದಿಸಿದರು.

# ಪೆಸಿಲಿಟೇಟರ್ ಹುದ್ದೆಗೆ ತಾತ್ಕಾಲಿಕ ನೇಮಕಾತಿಗಾಗಿ ಸಂದರ್ಶನ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ಕೃಷಿ ವಿಶ್ವವಿದ್ಯಾಲಯದ ದೇಸಿ (ಕೃಷಿ ಪರಿಕರ ಮಾರಾಟಗಾರರಿಗೆ ಕೃಷಿ ವಿಸ್ತರಣಾ ಸೇವೆಗಳ ಡಿಪ್ಲೋಮಾ ಕೋರ್ಸ್) ಯೋಜನೆಯಡಿ, ಕೃಷಿ ವಿಜ್ಞಾನ ಕೇಂದ್ರಗಳಾದ ಧಾರವಾಡ, ಬಾಗಲಕೋಟೆ, ಹನುಮನಮಟ್ಟಿ (ಹಾವೇರಿ) ಮತ್ತು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಸಂಕೇಶ್ವರ (ಬೆಳಗಾವಿ)ಗಳಲ್ಲಿ ಖಾಲಿ ಇರುವ ಪೆಸಿಲಿಟೇಟರ್ ಹುದ್ದೆಗೆ ತಾತ್ಕಾಲಿಕವಾಗಿ ನೇಮಕಾತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕೃಷಿ ಅಥವಾ ತೋಟಗಾರಿಕಾ ವಿಷಯದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿಯನ್ನು ಮತ್ತು ಕನಿಷ್ಠ ಮೂರು ವರ್ಷಗಳ ಸೇವಾ ಅನುಭವ ಪಡೆದಿರಬೇಕು.

ಅಭ್ಯರ್ಥಿಗಳು ಅರ್ಜಿ ನಮೂನೆಯ ಎರಡು ಪ್ರತಿ ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ಜನವರಿ 19ರ ಮುಂಜಾನೆ 11 ಗಂಟೆಗೆ ವಿಸ್ತರಣಾ ನಿರ್ದೇಶನಾಲಯ ಕೃಷಿ ವಿಶ್ವವಿದ್ಯಾಲಯ ಧಾರವಾಡ ಇಲ್ಲಿಗೆ ಸಂದರ್ಶನಕ್ಕೆ ಹಾಜರಾಗಬೇಕು.

ಹೆಚ್ಚಿನ ಮಾಹಿತಿಗಾಗಿ ಕೃಷಿ ವಿಶ್ವವಿದ್ಯಾಲಯ, ಧಾರವಾಡ ವೆಬ್‌ಸೈಟ್: www.uasd.edu ಸಂಪರ್ಕಿಬೇಕೆಂದು ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಧರ್ಮ ಜಾಗೃತಿ ಸಮಾರಂಭದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

# ಧರ್ಮದ ಉಳಿವು-ಅಳಿವು ನಮ್ಮ ಆಚರಣೆಯಲ್ಲಿದೆ

■ **ವಿಜಯಸಾಕ್ಷಿ ಸುದ್ದಿ, ಕೊಲನಪಾಕ**

ಮನುಷ್ಯ ಜೀವನ ಪವಿತ್ರ ಪಾವನ. ಅರಿತು ಬಾಳುವುದರಲ್ಲಿ ಬದುಕಿನ ಶ್ರೇಯಸ್ಸಿದೆ. ಧರ್ಮದ ಉಳಿವು ಮತ್ತು ಅಳಿವು ಮನುಷ್ಯನ ಆಚರಣೆಯಲ್ಲಿವೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಗುರುವಾರ ಕೊಲನಪಾಕ ಸ್ವಯಂಭು ಶ್ರೀ ಸೋಮೇಶ್ವರ ಕ್ಷೇತ್ರದಲ್ಲಿ ಜರುಗಿದ ಇಷ್ಟಲಿಂಗ ಮಹಾಪೂಜಾ ಹಾಗೂ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಪ್ರಾಣ, ಯೌವನ ಹಾಗೂ ಕಾಲ ಒಮ್ಮೆ ಕಳೆದರೆ ಮತ್ತೆಂದೂ ತಿರುಗಿ ಬರಲಾರವು. ಸದ್ವಿದ್ಯೆ, ಉತ್ತಮ ಸಂಬಂಧ ಮತ್ತು ಆದರ್ಶ ಸ್ನೇಹ ಯಾವಾಗಲೂ ನಮ್ಮೊಂದಿಗೆ ಇದ್ದರೆ ಬಾಳೆಲ್ಲ ಸುಖಮಯ. ಚಿಂತೆ ಚಿಂತನೆಗೊಂಡಾಗ ಬಾಳು ಉಜ್ವಲಗೊಳ್ಳಲು ಸಾಧ್ಯ. ಮನುಷ್ಯನಲ್ಲಿ ಒಳ್ಳೆಯ ಮತ್ತು ಕೆಟ್ಟ ಗುಣ ಎರಡೂ ಇವೆ. ಒಳ್ಳೆಯವರ ಒಡನಾಟದಲ್ಲಿ ಬಾಳಿದರೆ ಜೀವನ ವಿಕಾಸಗೊಳ್ಳುವುದು. ದುರ್ಜನರ ಒಡನಾಟದಲ್ಲಿ



ಬಾಳಿದರೆ ಬದುಕು ಸರ್ವನಾಶಗೊಳ್ಳುತ್ತದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಶಿವಾದ್ವೈತ ಜ್ಞಾನ ಸಂಪತ್ತು ಜೀವನ ವಿಕಾಸಕ್ಕೆ ಮೂಲಾಧಾರವಾಗಿದೆ ಎಂದರು.

ಮೇಹಕರ ಹಿರೇಮಠದ ರಾಜೇಶ್ವರ ಶ್ರೀಗಳು ಮಾತನಾಡಿ, ಮನಸ್ಸು ಇದ್ದರೆ ಮಾರ್ಗ ಯಾವಾಗಲೂ ಇದ್ದೇ ಇರುತ್ತದೆ. ಮನುಷ್ಯ ಭೌತಿಕ ಸಂಪತ್ತಿನ ಜೊತೆಗೆ ಆಧ್ಯಾತ್ಮ ಜ್ಞಾನವನ್ನು ಸಂಪಾದಿಸಿ ಜೀವನ ಸಾರ್ಥಕಗೊಳಿಸಬೇಕಾಗಿದೆ ಎಂದರು. ಮಳಲಿ ಸಂಸ್ಥಾನ ಮಠದ ಡಾ. ನಾಗಭೂಷಣ ಶ್ರೀಗಳು, ಮಂಗಲಗಿ ಮಠದ ಡಾ. ಸೋಮನಾಥ ಶ್ರೀಗಳು, ತೊಟ್ನಳ್ಳಿ ಡಾ.ತ್ರಿಮೂರ್ತಿ ಶ್ರೀಗಳು, ಲಿಂಗಸುಗೂರು ಮಾಣಿಕ್ಯೇಶ್ವರಿ ಆಶ್ರಮದ ಮಾತಾ ನಂದಿಕೇಶ್ವರಿ ಅಮ್ಮನವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸ್ಮರಣಿಕೆಯನ್ನು ಶ್ರೀ ರಂಭಾಪುರಿ ಜಗದ್ಗುರುಗಳು ಬಿಡುಗಡೆ ಮಾಡಿದರು.

ಹೈದರಾಬಾದಿನ ವೀರಶೈವ ಸಮಾಜದ ಅಧ್ಯಕ್ಷ ವೀರಮಲ್ಲೇಶ, ಜಂಗಮ ಸಮಾಜದ ಅಧ್ಯಕ್ಷ ವಿಶ್ವಂ, ಅಣ್ಣಾರಾವ ಬಿರಾದಾರ, ಶಿವಶರಣಪ್ಪ ಸೀರಿ, ಗುರುಪಾದಪ್ಪ ಕಿಣಗಿ ಪಾಲ್ಗೊಂಡಿದ್ದರು. ಸಿದ್ಧರಬೆಟ್ಟ ಕ್ಷೇತ್ರದ ವೀರಭದ್ರ ಶ್ರೀಗಳು ನಿರೂಪಿಸಿದರು. ಗಿರಿಯಪ್ಪ ಮುತ್ಯಾ ಅವರು ಅನ್ನದಾಸೋಹ ಸೇವೆ ಸಲ್ಲಿಸಿದರು.

ಕಾರ್ಯಕ್ರಮದ ನಿಮಿತ್ತ ಪ್ರಾತಃಕಾಲ ಶ್ರೀ ಸೋಮೇಶ್ವರ ಮಹಾಲಿಂಗಕ್ಕೆ ಅಭಿಷೇಕ, ಚಂಡಿಕಾಂಬಾ ದೇವಿಗೆ ಕುಂಕುಮಾರ್ಚನೆ ಜರುಗಿತು. ಲೋಕಕಲ್ಯಾಣಕ್ಕಾಗಿ ಶ್ರೀ ರಂಭಾಪುರಿ ಜಗದ್ಗುರುಗಳು ಇಷ್ಟಲಿಂಗ ಮಹಾಪೂಜೆ ನೆರವೇರಿಸಿ ಭಕ್ತರಿಗೆ ಶುಭ ಹಾರೈಸಿದರು.

## ಮರ್ಯಾದಾ ಪುರುಷೋತ್ತಮ ಶ್ರೀರಾಮನಿಗೂ ಗದಗ ಜಿಲ್ಲೆಗೂ ಇದೆ ನಂಟು!

▸▸ ಮೊದಲನೇ ಪುಟದಿಂದ

ಅದೇ ಸ್ಥಳದಲ್ಲಿ ಭವ್ಯವಾದ ಶ್ರೀರಾಮ ಮಂದಿರವನ್ನು ನಿರ್ಮಾಣಗೊಂಡು, ನಿತ್ಯ ಆರಾಧನೆಯೂ ನಡೆಯುತ್ತಿದೆ.

ಗದಗ ತಾಲೂಕಿನ ಬೆಳದಡಿ ಗ್ರಾಮ ಆಗ, ದಟ್ಟವಾದ ಅರಣ್ಯ ಪ್ರದೇಶವಾಗಿತ್ತು.

ಶ್ರೀರಾಮ ಹಾಗೂ ಲಕ್ಷಣ ಇಲ್ಲಿನ ದಟ್ಟವಾದ ಕಾಡಿನಲ್ಲಿ ಒಂದು ದಿನ ವಾಸ್ತವ್ಯ ಹೂಡಿ, ವಿಶ್ರಮಿಸಿ ಹೋಗಿದ್ದಾರೆ ಎಂಬ ಪ್ರತೀತಿಯಿದೆ. ತ್ರಿಕಾಲ ಜ್ಞಾನಿ ಬ್ರಹ್ಮ ಚೈತನ್ಯ ಮಹಾರಾಜರು ಈ ಜಾಗದಲ್ಲಿ ಶ್ರೀರಾಮ ಹಾಗೂ ಲಕ್ಷ್ಮಣ ವಾಸ್ತವ್ಯ ಮಾಡಿದ್ದು, ಇಲ್ಲೊಂದು ಭವ್ಯವಾದ ಶ್ರೀರಾಮನ ಮಂದಿರ ನಿರ್ಮಾಣ ಮಾಡಬೇಕು ಎಂದು ಸಂಕಲ್ಪ ಮಾಡಿದರು. ಮುಂದೆ ಜೈಪುರದಿಂದ ಅಮೃತ ಶಿಲೆಯಿಂದ ಕೆತ್ತನೆ ಮಾಡಿದ ಶ್ರೀ ರಾಮ, ಲಕ್ಷ್ಮಣ, ಸೀತಾದೇವಿ ಹಾಗೂ ಹನುಮಾನ್ ಮೂರ್ತಿಗಳನ್ನು ತಂದು, ಪ್ರತಿಷ್ಠಾಪನೆ ಮಾಡಿದರು ಎನ್ನಲಾಗುತ್ತದೆ.

ಬೆಳದಡಿಯ ಈ ಮಂದಿರದಲ್ಲಿ ಅತ್ಯಂತ ಆಕರ್ಷಕ ಮೂರ್ತಿಗಳು ಪ್ರತಿಷ್ಠಾಪನೆಯಾಗಿದ್ದು, ವಿಗ್ರಹಗಳು ಸಾಕ್ಷಾತ್ ದೇವತೆಗಳ ಪ್ರತಿರೂಪವಾಗಿವೆ. ಇದೇ ಕಾರಣಕ್ಕಾಗಿ ಈ ಮಂದಿರವನ್ನು 'ಸಜೀವ ಶ್ರೀರಾಮ ಮಂದಿರ' ಎಂದೇ ಕರೆಯಲಾಗುತ್ತದೆ. ಶ್ರೀರಾಮ, ಲಕ್ಷ್ಮಣ ಹಾಗೂ ಸೀತಾ ಮಾತೆ ಗರ್ಭಗುಡಿಯಲ್ಲಿ ನೆಲೆ ನಿಂತಿದ್ದರೆ, ಎದುರಿಗೆ ಹನುಮಾನ್ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಶ್ರೀ ರಾಮನ ಪಾದಸ್ಪರ್ಶವಾಗಿರುವುದರಿಂದಲೇ ಈ ಮಂದಿರ ಜೀವಕಳೆ ಹೊಂದಿದೆ ಎನ್ನಲಾಗುತ್ತದೆ.

ಒಟ್ಟಿನಲ್ಲಿ, ಪ್ರಭು ಶ್ರೀರಾಮ ಹಾಗೂ ಲಕ್ಷ್ಮಣರ ಪಾದಸ್ಪರ್ಶದಿಂದ ಈ ಗ್ರಾಮ ಪುನೀತವಾಗಿದೆ ಎನ್ನುತ್ತಾರೆ ಇಲ್ಲಿನ ಭಕ್ತಾದಿಗಳು.

# ಚನ್ನವೀರಶರಣರ ಮಠದ ದಿನದರ್ಶಿಕೆ ಬಿಡುಗಡೆ



■ **ವಿಜಯಸಾಕ್ಷಿ ಸುದ್ದಿ, ಗದಗ**

ತಾಲೂಕಿನ ಸುಕ್ಷೇತ್ರ ಬಳಗಾನೂರಿನ ಚಿಕೇನಕೊಪ್ಪದ ಚನ್ನವೀರಶರಣರ ಮಠದ 2024ರ ದಿನದರ್ಶಿಕೆಯನ್ನು ಗದುಗಿನ ಗಂಗಾಧರ ಗಡ್ಡಿ ಅವರ ನೂತನ ಸಭಾಂಗಣದಲ್ಲಿ ಪೂಜ್ಯ ಶ್ರೀ ಶಿವಶಾಂತವೀರ ಶರಣರು ಬಿಡುಗಡೆಗೊಳಿಸಿದರು.

ಫೆಬ್ರುವರಿ 16ರಂದು ಜರುಗಲಿರುವ ಚಿಕೇನಕೊಪ್ಪದ ಚನ್ನವೀ ರಶರಣರ ಪುಣ್ಯಸ್ಮರಣೋತ್ಸವ ಮತ್ತು ಜಾತ್ರಾ ಮಹೋತ್ಸವದ ಕಾರ್ಯಕ್ರಮಗಳ ಸಂಕ್ಷಿಪ್ತ ಪಕ್ಷಿನೋಟವನ್ನು ತಿಳಿಸಿ, ಶ್ರೀಮಠದ ಜಾತ್ರಾ ಮಹೋತ್ಸವ, ಮಹಾರಥೋತ್ಸವ, ಸಾಮೂಹಿಕ ವಿವಾಹ, ಸುಮಂಗಲೆಯರಿಗೆ ಉಡಿ ತುಂಬುವ ಕಾರ್ಯಕ್ರಮ, ಶರಣಶ್ರೀ ಪ್ರಶಸ್ತಿ ಪ್ರದಾನ, ಪ್ರವಚನ ಕಾರ್ಯಕ್ರಮ, ಲಿಂಗದೀಕ್ಷೆ, ಅಯ್ಯಾಚಾರ ಕಾರ್ಯಕ್ರಮ, ಜಾನಪದ ಕಲಾಮೇಳ, ಸಾಂಸ್ಕೃತಿಕ, ಸಾಹಿತ್ಯಿಕ, ಧಾರ್ಮಿಕ ಕಾರ್ಯಕ್ರಮಗಳು ಜರುಗುವವು ಎಂದು ತಿಳಿಸಿದರು.

ಎಂ.ಬಿ. ಸಿಕ್ಕೇದೇಸಾಯಿ, ಜಿ.ಆರ್. ಓದುಗೌಡರ, ಜಿ.ಪಂ. ಮಾಜಿ ಅಧ್ಯಕ್ಷ ಪ್ರಭಣ್ಣ ಹುಣಸೀಕಟ್ಟಿ, ಎಸ್.ಎಫ್. ಗದ್ದಿಕೇರಿ, ತಾ.ಪಂ. ಮಾಜಿ ಅಧ್ಯಕ್ಷ ಶರಣಪ್ಪಗೌಡ ಪಾಟೀಲ, ಎಸ್.ಪಿ. ಪಾಟೀಲ, ನಿವೃತ್ತ ಉಪನಿರ್ದೇಶಕ ಎ.ಎನ್. ನಾಗರಳ್ಳಿ, ವ್ಹಿ.ಬಿ. ಪೊಲೀಸಪಾಟೀಲ, ವಿ.ಸಿ. ಬಳ್ಳೊಳ್ಳಿ, ಸಿದ್ದು ಉಮಚಗಿ, ಬಸವರಾಜ ಉಮಚಗಿ, ಮಹಾದೇವಪ್ಪ ಗೌರಿಪುರ, ಪುಂಡಲೀಕಪ್ಪ ಕಂಬಿ ಸೇರಿದಂತೆ ಶರಣ ಬಳಗದ ಸದಸ್ಯರು ಉಪಸ್ಥಿತರಿದ್ದರು. ಶಿವಲಿಂಗಶಾಸ್ತ್ರಿ ಸಿದ್ದಾಪೂರ ಸ್ವಾಗತಿಸಿದರು. ಬಿ.ವಾಯ್. ಡೊಳ್ಳಿನ ಕಾರ್ಯಕ್ರಮ ನಿರೂಪಿಸಿದರು. ಪ್ರಾ. ಐ.ಎಸ್. ಹೂಗಾರ ವಂದಿಸಿದರು.

# ಸಂಜಯ ಶೆಟ್ಟೆಣ್ಣವರರಿಗೆ ಸನ್ಮಾನ




■ **ವಿಜಯಸಾಕ್ಷಿ ಸುದ್ದಿ, ಗದಗ**

ಬೆಳಗಾವಿ ಕಂದಾಯ ವಿಭಾಗದ ಪ್ರಾದೇಶಿಕ ಆಯುಕ್ತ ಸಂಜಯ ಬಿ.ಶೆಟ್ಟೆಣ್ಣವರ ಪದೋನ್ನತಿ ಪಡೆದ ನಿಮಿತ್ತ ಶ್ರೀ ಕಾಳಿದಾಸ ಶಿಕ್ಷಣ ಸಮಿತಿಯ ರಾಕೇಶ ಸಿದ್ದರಾಮಯ್ಯ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಗದಗ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಫಕೀರಪ್ಪ ಈ.ಹೆಬಸೂರ, ಸಮಿತಿಯ ಕಾರ್ಯದರ್ಶಿ ವಾಯ್.ಬಿ. ಬಾನಾಪೂರ, ಸಂಸ್ಥಾಪಕ ಎಸ್.ಆರ್. ರೊಳ್ಳಿ, ಶಿವಣ್ಣ ಸಿಂಗಟಾಲಕೇರಿ, ವಾಯ್.ಡಿ. ಜಡದೇಲಿ, ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯ ರಮೇಶ ವಡವಿ, ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ವಿಕಲಾಂಗ ಚೇತನರಿಗೆ ಸಮಾಜ ಸ್ಪಂದಿಸಲಿ




■ **ವಿಜಯಸಾಕ್ಷಿ ಸುದ್ದಿ, ಧಾರವಾಡ**

ವಿಕಲಾಂಗ ಚೇತನರು ಈ ಸಮಾಜದ ಆಸ್ತಿ. ಅವರಿಗೆ ಎಲ್ಲ ರೀತಿಯ ಗೌರವ, ಸ್ಪಂದನೆ ಸಮಾಜದಿಂದ ಹೆಚ್ಚೆಚ್ಚು ಸಿಗಬೇಕಿದೆ ಎಂದು ಸಭಾಪತಿ ಬಸವರಾಜ್ ಹೊರಟ್ಟಿ ಅಭಿಪ್ರಾಯಪಟ್ಟರು.

ಅವರು ಧಾರವಾಡದ 'ಸಮರ್ಥನಂ' ಅಂಗವಿಕಲ ಸಂಸ್ಥೆಯ ವತಿಯಿಂದ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ವಿಕಲಾಂಗ ಚೇತನರ ದಿನಾಚರಣೆ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಈ ದಿನ ಜಗತ್ತಿನಾದ್ಯಂತ ವಿಕಲಚೇತನರ ಬಗ್ಗೆ ಚಿಂತನ-ಮಂಥನ ನಡೆಸುವುದರೊಂದಿಗೆ ಅವರನ್ನು ಸಮಾಜದ ಮುಂಚೂಣಿಯಲ್ಲಿ ತರುವುದಕ್ಕಾಗಿ ಹತ್ತಾರು ಯೋಜನೆಗಳನ್ನ ರೂಪಿಸಲಾಗುತ್ತಿದೆ. ಪ್ರತಿಯೊಂದು ದೇಶವೂ ಈ ವ್ಯಕ್ತಿಗಳಿಗಾಗಿ ವಿಶೇಷ ಯೋಜನೆಗಳನ್ನು ರೂಪಿಸಿ ಅವರನ್ನು ಸಮರ್ಥರನ್ನಾಗಿ ಸಮುದಾಯದಲ್ಲಿ ಬಿಂಬಿಸುವ ಜೊತೆಗೆ ಅವರು ತಮ್ಮ ತಮ್ಮ ಬದುಕನ್ನು ಕಟ್ಟಿಕೊಂಡು ಸ್ವಾವಲಂಬಿಗಳಾಗಿ ಬದುಕಲು ಅವಕಾಶ ಕಲ್ಪಿಸುತ್ತಾ ಬಂದಿದೆ. ಇದರ ಸದುಪಯೋಗವನ್ನು ವಿಕಲಚೇತನರು ಪಡೆದುಕೊಳ್ಳಬೇಕು.

ಆ ದೇವರು ನಿಮಗೆ ವಿಶೇಷ ವ್ಯಕ್ತಿತ್ವವನ್ನು, ಬುದ್ಧಿ, ಸಾಮರ್ಥ್ಯವನ್ನು ನೀಡಿರುತ್ತಾನೆ. ಜಗತ್ತಿನ ಬಹುತೇಕ ವಿಕಲಚೇತನ ಸಾಧಕರ ಬದುಕು ಅವರ ಸಾಧನೆ ಹಾದಿಯನ್ನು ತಾವು ಅರಿತುಕೊಳ್ಳಬೇಕು. ಪ್ರತಿಯೊಂದು ಕ್ಷೇತ್ರದಲ್ಲಿಯೂ ನಿಮಗೆ ಮುಕ್ತವಾಗಿ ಭಾಗವಹಿಸಲು ಸಮಾಜ ಅವಕಾಶ ಕಲ್ಪಿಸಿದೆ. ವಿಶೇಷ ತರಬೇತಿ ಪಡೆದು ಸಾಧನೆಯನ್ನು ಮಾಡಿ ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ವಿಕಲಚೇತನ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ಸಮರ್ಥನಂ ಸಂಸ್ಥೆಯ ಸರ್ವ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಅಯ್ಯಪ್ಪಸ್ವಾಮಿಯ ಮಹಾಪೂಜೆ ನಾಳೆ

■ **ವಿಜಯಸಾಕ್ಷಿ ಸುದ್ದಿ, ಗದಗ**



ಶ್ರೀ ಅಯ್ಯಪ್ಪಸ್ವಾಮಿ ಸೇವಾ ಸಮಿತಿ ವತಿಯಿಂದ ಜಾಧವ ಪ್ಲಾಟ, ಹಾಳಕೇರಿ ಮಠದ ಹತ್ತಿರ ದಿ. ಶ್ರೀ ಬೈಂದೂರ ಗುರುಸ್ವಾಮಿಗಳ ಹಾಗೂ ವಿರೇಶ್ವರ ಪುಣ್ಯಾಶ್ರಮದ ಶ್ರೀ ಕಲ್ಲಯ್ಯಜ್ಜನವರ ಆಶೀರ್ವಾದದೊಂದಿಗೆ ಮಾರೇಪ್ಪ ರಾಹುಲ್ ಗುರುಸ್ವಾಮಿಗಳ ನೇತೃತ್ವದಲ್ಲಿ ಚನ್ನಪ್ಪ ನಾಗಪ್ಪ ತೋಟಗೇರ ಗುರುಸ್ವಾಮಿಗಳ 18ನೇ ವರ್ಷದ ಶಬರಿಮಲೈ ಯಾತ್ರೆಯ ನಿಮಿತ್ತ ಜ.6ರಂದು ಗಣಹೋಮ ಹಾಗೂ ಮಹಾ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿದೆ.

ಸಾಯಂಕಾಲ 6 ಗಂಟೆ ಅಯ್ಯಪ್ಪ ಸ್ವಾಮಿಯ ಮಹಾಪೂಜೆ ನೆರವೇರುವುದು. ಜ.7ಕ್ಕೆ ಇರುಮುಡಿ ಕಟ್ಟುವ ಕಾರ್ಯಕ್ರಮವಿದ್ದು, ಎಲ್ಲಾ ಮಾಲಾಧಾರಿ ಸ್ವಾಮಿಗಳ ನೇತೃತ್ವದಲ್ಲಿ ಜಾಧವ ಪ್ಲಾಟ್‌ನ ಸನ್ನಿಧಾನದಿಂದ ವರಸಿದ್ಧಿ ವಿನಾಯಕ ದೇವಸ್ಥಾನದವರೆಗೆ ಪಾದಯಾತ್ರೆ ಜರುಗುವುದು.

ಈ ಪೂಜಾ ಕಾರ್ಯಕ್ರಮದಲ್ಲಿ ಎಲ್ಲ ಸದ್ಭಕ್ತರು ಭಾಗವಹಿಸಿ ಅಯ್ಯಪ್ಪ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಗುರುಸ್ವಾಮಿ ಚನ್ನಪ್ಪ ನಾ.ತೋಟಗೇರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾವಿತ್ರಿಬಾಯಿ ಫುಲೆಯವರ ಘನತೆ ನೆನೆಯೋಣ



■ **ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾದರೆ ಅದರ ನಷ್ಟ ಆ ಕುಟುಂಬಕ್ಕೆ ಮಾತ್ರವಲ್ಲ, ಇಡೀ ಸಮಾಜಕ್ಕೆ ಆಗುತ್ತದೆ ಎಂದು ಭಾವಿಸಿದ್ದ ಸಾವಿತ್ರಿಬಾಯಿ ಫುಲೆ ಅವರು ಶಿಕ್ಷಣದ ಅಭಿವೃದ್ಧಿಗಾಗಿ ಅವಿರತವಾಗಿ ಹೋರಾಡಿ, ಆಧುನಿಕ ಶಿಕ್ಷಣದ ತಾಯಿಯಾಗಿ ಸಾಧನೆ ಮಾಡಿದ್ದಾಳೆ ಎಂದು ಹಿರಿಯ ಶಿಕ್ಷಕ ಬಸವರಾಜ ಗರ್ಜಪ್ಪನವರ ಹೇಳಿದರು.

ಇಲ್ಲಿಯ ಬಾಪೂಜಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಸಾವಿತ್ರಿ ಫುಲೆ ಅವರ ಜಯಂತಿ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ಅಂದಿನ ಪುರುಷ ಪ್ರಧಾನ ಸಮಾಜದಲ್ಲಿ ಸಾಕಷ್ಟು ನೋವು, ಯಾತನೆಗಳನ್ನು ಅನುಭವಿಸಿದವರು ಸಾವಿತ್ರಿಬಾಯಿ ಫುಲೆ. ಅಂದು ಬ್ರಿಟಿಷರಿಂದ ಇಂಡಿಯಾಸ್ ಫಸ್ಟ್ ಲೇಡಿ ಟೀಚರ್ ಎನ್ನುವ ಗೌರವಕ್ಕೆ ಭಾಜನರಾಗಿದ್ದರು. ಸಮಾಜ ಸುಧಾರಕಿಯ ಘನತೆಯನ್ನು ಇಂದು ನೆನೆಯಬೇಕಾಗಿದೆ ಎಂದರು.

ಶಿಕ್ಷಕಿ ರಫಿಯಾ ದಂಡಿನ ಮಾತನಾಡಿ, ಒಬ್ಬ ಉತ್ತಮ ಶಿಕ್ಷಕರಿಂದ ಪರಿಪೂರ್ಣ ಜ್ಞಾನಾತ್ಮಕ ಸಮಾಜ ಸೃಷ್ಟಿಸಲು ಸಾಧ್ಯ. ಹಾಗೆಯೇ ಸಾವಿತ್ರಿಬಾಯಿ ಫುಲೆಯವರು ಅಂದಿನ ಸತಿಸಹಗಮನ ಪದ್ಧತಿ, ಬಾಲ್ಯ ವಿವಾಹ, ಕೇಶ ಮುಂಡನೆ, ಸಾಮಾಜಿಕ ಮೂಢನಂಬಿಕೆ ವಿರುದ್ಧ ಹೋರಾಟ ಮಾಡಿದರು. ಹೆಣ್ಣು ಮಕ್ಕಳ ಶಿಕ್ಷಣದ ಕುರಿತು ಹಗಲಿರುಳು ಶ್ರಮಿಸಿದ್ದಾರೆ ಎಂದರು.

ಆರ್.ಬಿ. ಬರದ್ವಾಡ, ರುದ್ರಮ್ಮ ಹಿರೇಮಠ, ಎ.ಎಂ. ದಂಡಿನ, ಎಸ್.ವಿ. ಗರ್ಜಪ್ಪನವರ, ಎಫ್.ಬಿ. ಬರದ್ವಾಡ ಉಪಸ್ಥಿತರಿದ್ದರು. ಸಂಗೀತಾ ತಡಹಾಳ ನಿರೂಪಿಸಿ ವಂದಿಸಿದರು.

# ಉಚಿತ ಆರೋಗ್ಯ ತಪಾಸಣಾ ಶಿಬಿರ



■ **ವಿಜಯಸಾಕ್ಷಿ ಸುದ್ದಿ, ಮುಳಗುಂದ**

ಮಹಿಳೆಯರು ತಮ್ಮ ಆರೋಗ್ಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವುದು ಅಗತ್ಯವಾಗಿದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಜಿಲ್ಲಾ ನಿರ್ದೇಶಕ ಯೋಗೇಶ ಹೇಳಿದರು.

ಅವರು ಸಮೀಪದ ನೀಲಗುಂದ ವಲಯ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ವತಿಯಿಂದ ಕಲ್ಲೂರ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿ, ಉತ್ತಮ ಆರೋಗ್ಯ ಹೊಂದಲು ಪೌಷ್ಠಿಕ ಆಹಾರ ಸೇವನೆಯೊಂದಿಗೆ ನಮ್ಮ ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿಟ್ಟುಕೊಳ್ಳುವುದರಿಂದ ಉತ್ತಮ ಆರೋಗ್ಯ ಹೊಂದಲು ಸಹಕಾರಿಯಾಗುತ್ತದೆ. ಈ ಉಚಿತ ಆರೋಗ್ಯ ಶಿಬಿರದ ಸದುಪಯೋಗವನ್ನು ಪ್ರತಿಯೊಬ್ಬರೂ ಪಡೆದುಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ಗದಗ ಆಯುರ್ವೇದ ವೈದ್ಯಕೀಯ ವೈದ್ಯರಿಂದ ಉಚಿತ ಆರೋಗ್ಯ ತಪಾಸಣೆ, 50ಕ್ಕೂ ಹೆಚ್ಚು ಫಲಾನುಭವಿಗಳಿಗೆ ಕನ್ನಡಕ ವಿತರಿಸಲಾಯಿತು. ಸಂಘದ ಗದಗ ಯೋಜನಾಧಿಕಾರಿ ಸುರೇಂದ್ರ ನಾಯಕ್, ನೀಲಗುಂದ ವಯಲ ಮೇಲ್ವಿಚಾರಕ ರಾಜು ಲಕ್ಕುಂಡಿ, ಗಂಗಮ್ಮಾ, ಕುತೇಜಾಬೆಗಂ, ಮುದುಕಮ್ಮಾ ಹಾಗೂ ಶಿಬಿರಾರ್ಥಿಗಳು ಹಾಜರಿದ್ದರು.

# 'ಖಿದ್ಮಾ ಕಾವ್ಯಾಮೃತ' ಜ.7ಕ್ಕೆ

■ **ವಿಜಯಸಾಕ್ಷಿ ಸುದ್ದಿ, ಗದಗ**



ಖಿದ್ಮಾ ಫೌಂಡೇಶನ್ ಕರ್ನಾಟಕ ಮತ್ತು ವಿಜಯ ಕಾಲೇಜು ಜಯನಗರ, ಬೆಂಗಳೂರು ಇವರ ಸಹಯೋಗದಲ್ಲಿ ಕರ್ನಾಟಕ ಸುವರ್ಣ ಮಹೋತ್ಸವದ ಪ್ರಯುಕ್ತ ಆಯೋಜಿಸಲಾಗಿರುವ ರಾಜ್ಯಮಟ್ಟದ 'ಖಿದ್ಮಾ ಕಾವ್ಯಾಮೃತ-2024' ಕಾರ್ಯಕ್ರಮ ಜ.7ರಂದು ಬೆಂಗಳೂರಿನ ಜಯನಗರ 4ನೇ ಹಂತದಲ್ಲಿರುವ ವಿಜಯ ಕಾಲೇಜಿನ ಹಸಿರು ಭವನದಲ್ಲಿ ನಡೆಯಲಿದೆ.

ವಿವಿಧ ಜಿಲ್ಲೆಗಳಿಂದ ಆಯ್ಕೆಯಾದ ಸುಮಾರು 35 ಕವಿಗಳು ಕವಿಗೋಷ್ಠಿಯಲ್ಲಿ ಕವನ ವಾಚನ ಮಾಡಲಿದ್ದಾರೆ.

ಕರ್ನಾಟಕ ಸುವರ್ಣ ಮಹೋತ್ಸವದ ಸವಿನೆನಪಿಗಾಗಿ ಸಾಧಕರಿಗೆ 'ಖಿದ್ಮಾ ಸೇವಾ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ ಎಂದು ಕಾರ್ಯಕ್ರಮದ ಆಯೋಜಕ ಹಾಗೂ ಸಂಚಾಲಕ ಆಮಿರ್ ಬನ್ನೂರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರೌಢಶಾಲೆ ವಿದ್ಯಾರ್ಥಿಗಳಿಗೆ 'ಪ್ರಾಚ್ಯ ಪ್ರಜ್ಞೆ' ಕಾರ್ಯಕ್ರಮ



■ **ವಿಜಯಸಾಕ್ಷಿ ಸುದ್ದಿ, ಗದಗ**

ಇಲ್ಲಿನ ಶ್ರೀ ವೀರನಾರಾಯಣ ದೇವಸ್ಥಾನದಲ್ಲಿ ಶಹರ ವಲಯದ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ 'ಪ್ರಾಚ್ಯ ಪ್ರಜ್ಞೆ' ಕಾರ್ಯಕ್ರಮದಂಗವಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್. ಬುರಡಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಪ್ರಾಚೀನ ಶಾಸನ, ಸ್ಮಾರಕ, ಪರಂಪರೆ, ಸಂಸ್ಕೃತಿಗಳ ಬಗ್ಗೆ ಅರಿವು ಮೂಡಿಸುವ ಮೂಲಕ ಅವುಗಳನ್ನು ರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಿರ್ಣಾಯಕರಾಗಿ ಡಾ. ಡಿ.ಎಲ್. ಪಾಟೀಲ, ಡಾ. ವಾಯ್.ಆರ್. ಬೇಲೇರಿ, ಡಾ. ಎಸ್.ಎಮ್. ಮಠ, ಡಿ.ಎಸ್. ನಾಯಕ, ಪಿ.ಬಿ. ಬಂಡಿ, ಟಿ.ಆರ್. ಬೇವಿನಮರದ, ಎಸ್.ವಿ. ಲಾಂಡೆ, ಕೆ.ಎಸ್. ಬೇಲೇರಿ ಆಗಮಿಸಿದ್ದರು. ಸಮನ್ವಯಾಧಿಕಾರಿ ಎಚ್.ಎ. ಫಾರೂಖಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಆಯ್.ಬಿ. ಮಡಿವಾಳರ ವಂದಿಸಿದರು. ನೋಡಲ್ ಪ್ರಕಾಶ ಮಂಗಳೂರು ನಿರ್ವಹಿಸಿದರು. 15 ಪ್ರೌಢಶಾಲೆಗಳಿಂದ 75 ವಿದ್ಯಾರ್ಥಿಗಳು ಹಾಗೂ ಮಾರ್ಗದರ್ಶಿ ಶಿಕ್ಷಕರು ಉಪಸ್ಥಿತರಿದ್ದರು.

# ಅಭಿಸಂಧಾನ ದಂಡ ವಸೂಲಿ

■ವಿಜಯಸಾಕ್ಷಿ ಸುದ್ದಿ, ಗದಗ

ಕಾನೂನು ಮಾಪನ ಶಾಸ್ತ್ರ ಸಹಾಯಕರ ನಿಯಂತ್ರಕರು ಗದಗ ಇವರಿಂದ ಡಿ–2023ರ ಮಾಹೆಯ ಅಂತ್ಯದವರೆಗೆ ಜಿಲ್ಲೆಯಲ್ಲಿ ಒಟ್ಟು ರೂ.66,98,992/–ಸತ್ಯಾಪನೆ ಶುಲ್ಕ ಸಂಗ್ರಹಿಸಲಾಗಿದ್ದು, ಕಿರಾಣಿ ವ್ಯಾಪಾರಸ್ಥರು, ನ್ಯಾಯಬೆಲೆ ಅಂಗಡಿಗಳು, ಇನ್ನಿತರ ಒಟ್ಟು 723 ಅಂಗಡಿಗಳ ತಪಾಸಣೆ ಮಾಡಿ ತಪ್ಪಿತಸ್ಥರ ವಿರುದ್ಧ ಒಟ್ಟು 197 ಮೊಕದ್ದಮೆಗಳನ್ನು ಹೂಡಲಾಗಿದೆ.

ಸದರಿ ಮೊಕದ್ದಮೆಗಳನ್ನು ಅಭಿಸಂಧಾನದ ಮೂಲಕ ಇತ್ಯರ್ಥ ಮಾಡಿ, ಡಿ–2023ರ ಅಂತ್ಯದವರೆಗೆ ಒಟ್ಟು ರೂ. 9,11,000/– ಅಭಿಸಂಧಾನ ದಂಡದ ಶುಲ್ಕವನ್ನು ವಸೂಲ ಮಾಡಲಾಗಿದೆ.

ಗ್ರಾಹಕರು ತೂಕ ಮತ್ತು ಅಳತೆಗೆ ಸಂಬಂಧಿಸಿದಂತೆ ದೂರುಗಳಿದ್ದಲ್ಲಿ ಸಹಾಯಕ ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣ, ಸಂಕಣ್ಣವರ ಬಡಾವಣೆ ಹತ್ತಿರ ಗದಗ ಅಥವಾ ಸಹಾಯವಾಣಿ ಸಂಖ್ಯೆ 18005991100 ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಕೆಂಗೇರಿ: ಒತ್ತುವರಿಯಾಗಿದ್ದ 80 ಕೋಟಿ ರೂ ಮೌಲ್ಯದ 6.5 ಎಕರೆ ಪ್ರದೇಶ ಅರಣ್ಯ ಇಲಾಖೆ ವಶಕ್ಕೆ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಕೆಂಗೇರಿಯ ಬಿಎಂ ಕಾವಲ್ ಗ್ರಾಮದಲ್ಲಿ ಒತ್ತುವರಿಯಾಗಿದ್ದ 6.5 ಎಕರೆಯಷ್ಟು ಪ್ರದೇಶವನ್ನು ಮರಳಿ ತನ್ನ ವಶಕ್ಕೆ ಪಡೆದಿದೆ.

ಸರ್ವೆ ನಂ.170 ರಲ್ಲಿ 80 ಕೋಟಿ ರೂಪಾಯಿ ಮೌಲ್ಯದ 6.5 ಎಕರೆ ಪ್ರದೇಶ ಒತ್ತುವರಿಯಾಗಿತ್ತು ಎಂದು ಇಲಾಖೆ ಮಾಹಿತಿ ನೀಡಿದೆ.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಬೆಂಗಳೂರು ವೃತ್ತದ ಅಧಿಕಾರಿಗಳು ಕಾರ್ಮಿಕರಿಗಾಗಿ ನಿರ್ಮಿಸಿದ ತಾತ್ಕಾಲಿಕ ಮನೆಗಳನ್ನು ನೆಲಸಮಗೊಳಿಸಿದರು.

### ವಿಜಯ ಲಲಿತಕಲಾ ಕಾಲೇಜಿನಲ್ಲಿ 'ಕೌಶಲ್ಯ ವಿಕಾಸ' ಸಮಾರಂಭ

# ಕಲಾ ಕೌಶಲ್ಯ ವಿಕಾಸದಿಂದ ವ್ಯಕ್ತಿತ್ವ ವಿಕಾಸ

■ವಿಜಯಸಾಕ್ಷಿ ಸುದ್ದಿ, ಗದಗ

ಪ್ರತಿಯೊಬ್ಬ ಆದರ್ಶ ವ್ಯಕ್ತಿಯ ಜೀವನ ಶೈಲಿ ಮತ್ತು ಆದರ್ಶ ಗುಣಗಳನ್ನು ಅಧ್ಯಯನ ಮಾಡಿ ಅವರಿಂದ ಪ್ರೇರಣೆ ಪಡೆದು, ಉತ್ತಮ ವ್ಯಕ್ತಿತ್ವ ನಿರ್ಮಾಣ ಮಾಡಿಕೊಳ್ಳಲು ಸಾಧ್ಯ. ಆದ್ದರಿಂದ ಕಲಾ ಕೌಶಲ್ಯ ವಿಕಾಸದಿಂದ ಉನ್ನತ ವ್ಯಕ್ತಿತ್ವ ನಿರ್ಮಾಣವಾಗುತ್ತದೆ. ತನ್ಮೂಲಕ ಉನ್ನತ–ಉಜ್ವಲ ಭವಿಷ್ಯ ನಿಮ್ಮದಾಗುತ್ತದೆ ಎಂದು 'ವಿಭೂತಿ' ಮಾಸ ಪತ್ರಿಕೆಯ ಪ್ರಕಾಶಕ ಅಂದಾನೆಪ್ಪ ವಿಭೂತಿ ಅಭಿಪ್ರಾಯಪಟ್ಟರು.

ವಿಜಯ ಲಲಿತಕಲಾ ಸಂಸ್ಥೆಯ ವಿಜಯ ಲಲಿತಕಲಾ ಕಾಲೇಜಿನ ವ್ಯಕ್ತಿತ್ವ ವಿಕಸನ ವಿಭಾಗದ ವತಿಯಿಂದ ವ್ಯಕ್ತಿತ್ವ ವಿಕಸನ ವಿಭಾಗದ 'ಕೌಶಲ್ಯ ವಿಕಾಸ' ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಜಯ ಲಲಿತಕಲಾ ಸಂಸ್ಥೆಯು ಸಮಾಜದ ಕೌಶಲ್ಯಯುಕ್ತ ವ್ಯಕ್ತಿತ್ವನ್ನು ಹೊಂದಿದ, ಪ್ರತಿಭಾವಂತ ವಿದ್ಯಾರ್ಥಿಗಳನ್ನು, ಸಾವಿರಾರು ಕಲಾವಿದರನ್ನು ಬೆಳೆಸಿ ಈ ನಾಡಿಗೆ ಕೊಡುಗೆ ನೀಡಿದೆ. ಅಂತಹ ಕೌಶಲ್ಯ ತುಂಬಿದ




ಪ್ರತಿಭಾವಂತರನ್ನು ಬೆಳೆಸುವದು ಕಷ್ಟಸಾಧ್ಯ. ಹೀಗಿರುವಾಗ, ಸಂಸ್ಥೆಯು ಇಲ್ಲಿಯವರೆಗೆ ಪ್ರತಿಭಾವಂತರ ಬದುಕು ಕಟ್ಟುವಲ್ಲಿ ಶ್ರಮಿಸುತ್ತಿದೆ. ಅದರಂತೆ ಆದರ್ಶತೆ ಮತ್ತು ವ್ಯಕ್ತಿತ್ವ ವಿಕಾಸವಾಗಬೇಕಾದರೆ ಸದಾ ಅಧ್ಯಯನ ಮತ್ತು ಸಹನೆ ಅತ್ಯಗತ್ಯ. ಸೃಜನಶೀಲ ಚಿಂತನೆ ಹೊಂದಿದವರು ಪ್ರತಿಭಾವಂತರಾಗಿ ಬೆಳೆಯಲು ಸಾಧ್ಯ. ಅದರಂತೆ ಕಲಾಮಹರ್ಷಿ ಟಿ.ಪಿ. ಅಕ್ಕಿ, ಬಿ.ಈ. ಅಣ್ಣಿಗೇರಿ ಹೀಗೆ ಹಲವಾರು ಗುರುಗಳು ಉತ್ತಮ ಸಂಸ್ಕಾರ ಸದ್ಗುಣಗಳೊಂದಿಗೆ ಉತ್ತಮ ಪ್ರತಿಭಾವಂತರನ್ನು ಬೆಳೆಸಿದ್ದಾರೆ. ಕೌಶಲ್ಯಯುಕ್ತ ಶಕ್ತಿಯನ್ನು ಬೆಳೆಸಲು ಸದಾ ಸದ್ಗುಣ ಮತ್ತು ಉನ್ನತ ಮಟ್ಟದ ಚಿಂತನೆಯ ಕಡೆಗೆ ಗಮನ ನೀಡಬೇಕು ಎಂದು ಕಿವಿಮಾತು ಹೇಳಿದರು.

ವೇದಿಕೆಯ ಮೇಲೆ ವ್ಯಕ್ತಿತ್ವ ವಿಕಸನ ವಿಭಾಗದ ಕೋಆರ್ಡಿನೇಟರ್ ಪ್ರೊ. ಎಸ್.ವಿ. ಗುಂಜಾಳ, ಪ್ರೊ. ಬಿ.ಸಿ. ಕುತ್ನಿ, ವಾಯ್.ಶ್ರೀದೇವಿ, ಕಾಲೇಜಿನ ಪ್ರಾಚಾರ್ಯರು, ಬಸವರಾಜ ಗೌಡರ, ಮಂಜುನಾಥ. ವೈ ಉಪಸ್ಥಿತರಿದ್ದರು.

ರಾಜೇಶ್ವರಿ ಸಂಗಡಿಗರು ಪ್ರಾರ್ಥಿಸಿದರು. ಪ್ರೊ. ಎಸ್.ವಿ. ಗುಂಜಾಳ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಪ್ರೊ. ಬಸವರಾಜ ನೆಲಜೇರಿ ನಿರೂಪಿಸಿದರು, ಮಂಜುನಾಥ ವೈ ವಂದಿಸಿದರು. ಕಾಲೇಜಿನ ಸಿಬ್ಬಂದಿವರ್ಗದವರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸಂಸ್ಥೆಯ ಅಧ್ಯಕ್ಷ ಪ್ರೊ. ಅಶೋಕ ಅಕ್ಕಿ ಮಾತನಾಡಿ, ಕೌಶಲ್ಯವೆಂಬುದು ಒಂದು ವಿಧದ ಅಭಿವ್ಯಕ್ತಿ. ಅದನ್ನು ಪಡೆಯಲು ಸದಾ ಸೃಜನಶೀಲ ಮನೋಭಾವ ಹೊಂದಬೇಕು. ಸದಾ ಕ್ರೀಯಾಶೀಲರಾಗಿ, ಅಧ್ಯಯನಶೀಲರಾಗಿ ಇದರಿಂದ ನೀವು ವಿಶೇಷ ಪ್ರತಿಭಾವಂತರಾಗಿ ಬೆಳೆಯಲು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

# ಅಯ್ಯಪ್ಪ ಸ್ವಾಮಿ ಮಾಹಾಪೂಜಾ ಕಾರ್ಯಕ್ರಮ



■ವಿಜಯಸಾಕ್ಷಿ ಸುದ್ದಿ, ರೋಣ

ಇಲ್ಲಿನ ಇಟಗಿ ಗ್ರಾಮದಲ್ಲಿ ಅಯ್ಯಪ್ಪ ಸ್ವಾಮಿಯ ಮಾಹಾಪೂಜಾ ಕಾರ್ಯಕ್ರಮವು ಅನ್ನದಾನೇಶ್ವರ ಮಠದಲ್ಲಿ ಗುರುಸ್ವಾಮಿ ಬಸವರಾಜ್ ಭೋವಿ ಅವರ ನೇತೃತ್ವದಲ್ಲಿ ನೆರವೇರಿತು. ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳಾದ ಚಂದ್ರು ಮೊಟಗಿ, ಶೇಖಪ್ಪ ಗುಜಮಾಗಡಿ, ಧರ್ಮಪ್ಪ ಕೊಡಗಾನೂರ, ಧರ್ಮಪ್ಪ ಭೋವಿ, ಯಲ್ಲಪ್ಪ ಕುರಿ, ಸಚಿನ ಜಡದೇಲಿ, ಯಲ್ಲಪ್ಪ ಕೋರಿ, ಮಂಜು ನಾಗರಾಳ, ಆನಂದ್ ಬಾರಕೇರ ಮುಂತಾದವರು ಶ್ರದ್ಧಾ–ಭಕ್ತಿಯಿಂದ ಪೂಜೆ ಸಲ್ಲಿಸಿದರು.

# ಚಾಂದಸಾಬ ಅಬ್ಬಿಗೇರಿಯವರಿಗೆ ಸನ್ಮಾನ

■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಎಂ.ಜಿ. ಚಾರಿಟೇಬಲ್ ಟ್ರಸ್ಟ್ ಹಾಗೂ ಅಬುಹುರೇರಾ ಮಸ್ಜೀದ ಗಂಗಿಮಡಿ ವತಿಯಿಂದ ಸೆಂಟ್ರಿಂಗ್ ಮತ್ತು ಬಾರ್ ಬೆಂಡಿಂಗ್ ಸಂಘಕ್ಕೆ ಅಧ್ಯಕ್ಷರಾಗಿ ಆಯ್ಕೆಯಾದ ಚಾಂದಸಾಬ ಅಬ್ಬಿಗೇರಿಯವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮೌಲಾನಾ ಅಬ್ದುಲ್ ಗಫೂರ ಪಲ್ಲೇದ, ಸೆಂಟ್ರಿಂಗ್ ಮತ್ತು ಬಾರ್ ಬೆಂಡಿಂಗ್ ಸಂಘ ಗದಗ–ಬೆಟಗೇರಿ ನೂತನವಾಗಿ ಪದಾಧಿಕಾರಿಗಳನ್ನು ಆಯ್ಕೆ ಮಾಡಿದ್ದಾರೆ. ಅಧ್ಯಕ್ಷರನ್ನಾಗಿ ಚಾಂದಸಾಬ ಅಬ್ಬಿಗೇರಿ,



ಉಪಾಧ್ಯಕ್ಷರನ್ನಾಗಿ ಖಾಜಾಪೀರ ಗೋಣಿಹಾಳ, ಕಾರ್ಯದರ್ಶಿಯಾಗಿ ನೂರಅಹ್ಮದ ಶಿರಹಟ್ಟಿ ಹಾಗೂ ಸಹ ಕಾರ್ಯದರ್ಶಿಯಾಗಿ ಜಾವೀದ ಮಕಾನದಾರ ಇವರನ್ನು ಆಯ್ಕೆ ಮಾಡಿರುವುದು ಹೆಮ್ಮೆಯ ವಿಷಯ ಎಂದರು.

ಚಾಂದಸಾಬ ಅಬ್ಬಿಗೇರಿಯವರ ಅಧಿಕಾರದ ಅವಧಿಯಲ್ಲಿ ಸೆಂಟ್ರಿಂಗ್ ಮತ್ತು ಬಾರ್ ಬೆಂಡಿಂಗ್ ಸಂಘಕ್ಕೆ ಇನ್ನೂ ಹೆಚ್ಚು ಹೆಚ್ಚು ಅಭಿವೃದ್ಧಿ ಕಾರ್ಯಗಳು ಜರುಗಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಅಬುಹುರೇರಾ ಮಸ್ಜಿದ್‌ನ ಅಧ್ಯಕ್ಷರಾದ ಹಾಜಿ ಹುಸೇನಸಾಬ ಪಲ್ಲೆದ, ಕಾರ್ಯದರ್ಶಿಯರಾದ ಮಹಮ್ಮದಸಾಬ ಬೋದ್ಲೆಖಾನ್, ಖಜಾಂಚಿ ಮೈನುದ್ದಿನ್ ಗುಜಮಾಗಡಿ, ಅಹಮ್ಮದ್ ಕಲೆಗಾರ, ಹಾಫಿಜ್ ರೋಣ, ಖಾನಸಾಬ ಗುಜಮಾಗಡಿ, ಬಾಬಾಜಾನ ಹಣಗಿ, ಬಾಬಾಜಾನ ಕೊಡತಗೇರಿ ಮುಂತಾದವರು ಉಪಸ್ಥಿತರಿದ್ದರು.

# ಯೋಗದಿಂದ ಒತ್ತಡ ನಿಯಂತ್ರಣ ಸಾಧ್ಯ



■ವಿಜಯಸಾಕ್ಷಿ ಸುದ್ದಿ, ಗದಗ

ಯೋಗದಿಂದ ಮನುಷ್ಯನ ಆರೋಗ್ಯದಲ್ಲಿ ಸದೃಢತೆ ಬರಲು ಸಾಧ್ಯವಿದೆ ಎಂದು ಗದುಗಿನ ಅಡವೀಂದ್ರ ಸ್ವಾಮಿ ಮಠದ ಧರ್ಮದರ್ಶಿ ಮಹೇಶ್ವರ ಸ್ವಾಮೀಜಿ ಹೊಸಳ್ಳಿಮಠ ಅಭಿಪ್ರಾಯಪಟ್ಟರು.

ಅವರು ಅಡವೀಂದ್ರಸ್ವಾಮಿ ಮಠದಲ್ಲಿ ನಡೆದ ಮಾಸಿಕ ಶಿವಾನುಭವ ಗೋಷ್ಠಿ, ದಿನದರ್ಶಿಕೆ ಬಿಡುಗಡೆ ಸಮಾರಂಭದ ಸಮ್ಮುಖ ವಹಿಸಿ ಮಾತನಾಡಿದರು. ಇಂದಿನ ಆಧುನಿಕ ದಿನಗಳಲ್ಲಿ ನಾವೆಲ್ಲ ಒತ್ತಡದ ನಡುವೆಯೇ ಜೀವನ ನಡೆಸುತ್ತಿದ್ದೇವೆ. ಒತ್ತಡದಿಂದಾಗಿ ಆರೋಗ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆಗಳಿದ್ದು, ಈ ಒತ್ತಡ ನಿಗ್ರಹಕ್ಕೆ ಯೋಗ ಅವಶ್ಯ ಎಂದರು.

ಯೋಗದ ಬಗ್ಗೆ ಉಪನ್ಯಾಸ ನೀಡಿದ ಯೋಗಾಚಾರ್ಯ ಪ್ರಾ. ಎಸ್.ಎಸ್. ಹಿರೇಮಠ ಮಾತನಾಡಿ, ಯೋಗಾಸನಗಳು ಮನುಷ್ಯ ಜೀವನದ ಒಂದು ಅಂಗವಾಗಬೇಕು. ಪ್ರತಿಯೊಬ್ಬರೂ ದೈಹಿಕ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ನಿತ್ಯ ಯೋಗಾಭ್ಯಾಸ ರೂಢಿಸಿಕೊಂಡು ಉತ್ತಮ ಆರೋಗ್ಯ ಕಾಯ್ದುಕೊಳ್ಳಬೇಕೆಂದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಗದುಗಿನ ರಾಣಿ ಚನ್ನಮ್ಮ ಸೌಹಾರ್ದ ಸಹಕಾರಿ ಪತ್ತಿನ ಸಂಘದ ಅಧ್ಯಕ್ಷ ಡಾ. ಎಸ್.ಕೆ. ಮ್ಯಾಗೇರಿ ಮಾತನಾಡಿ, ಜನತೆಯಲ್ಲಿ ವೈಚಾರಿಕ ಮತ್ತು ಧಾರ್ಮಿಕ ಪ್ರಜ್ಞೆ, ಧರ್ಮ ಜಾಗೃತಿ ಮೂಡಿಸುವಲ್ಲಿ ಮಠ–ಮಂದಿರಗಳ ಪಾತ್ರ ಹಿರಿದು ಎಂದರು.

ಎಚ್‌ಸಿಈಎಸ್ ಪ.ಪೂ ಮಹಾವಿದ್ಯಾಲಯದ ನೂತನ ಪ್ರಾಚಾರ್ಯ ಬಿ.ಬಿ. ಪಾಟೀಲ ಹಾಗೂ ಇತರನ್ನು ಸನ್ಮಾನಿಸಲಾಯಿತು. ಪ್ರಸಾದ ಸೇವೆಯನ್ನು ಎಂ.ಎಂ. ಜೋಗಿನ, ಶೇಖರಪ್ಪ ಹನಮನಾಳ ವಹಿಸಿದ್ದರು. ಸಿದ್ದಣ್ಣ ಜವಳಿ ಪ್ರಾರ್ಥಿಸಿದರು. ವಿನಾಯಕ ಸಜ್ಜನ ಸ್ವಾಗತಿಸಿದರು. ಯು.ಆರ್. ಭೂಸನೂರಮಠ ನಿರೂಪಿಸಿದರು. ಜಿ.ಎಂ. ಯಾನಮಶೆಟ್ಟಿ ವಂದಿಸಿದರು.

### ಶಿಕ್ಷಣ ಇಲಾಖೆಯ 'ಪ್ರಾಚ್ಯ ಪ್ರಜ್ಞೆ' ಕಾರ್ಯಕ್ರಮದಲ್ಲಿ ಚಂಬಣ್ಣ ಬಾಳಿಕಾಯಿ ಅಭಿಮತ

# ದೇವಸ್ಥಾನಗಳ ಸಂರಕ್ಷಣೆಗೆ ಕೈಜೋಡಿಸಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ವಿದ್ಯಾರ್ಥಿಗಳು ನಮ್ಮ ಭಾಗದ ಪ್ರಾಚೀನ ದೇವಸ್ಥಾನಗಳು, ಶಿಲ್ಪಕಲೆ, ಸಾಂಸ್ಕೃತಿಕ ಹಿರಿಮೆ–ಗರಿಮೆಯನ್ನು ಅರಿತು ಅವುಗಳ ಮಹತ್ವವನ್ನು ಸಾರುವ ಜವಾಬ್ದಾರಿ ನಿರ್ವಹಿಸಬೇಕು ಎಂದು ಶ್ರೀ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್‌ನ ಅಧ್ಯಕ್ಷ ಚಂಬಣ್ಣ ಬಾಳಿಕಾಯಿ ಹೇಳಿದರು.

ಅವರು ಗುರುವಾರ ಪಟ್ಟಣದ ಶ್ರೀ ಸೋಮೇಶ್ವರ ದೇವಾಲಯದಲ್ಲಿ ಶಿಕ್ಷಣ ಇಲಾಖೆಯಿಂದ ಹಮ್ಮಿಕೊಂಡ ಪ್ರಾಚ್ಯ ಪ್ರಜ್ಞೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ದೇವಸ್ಥಾನಗಳು ನಮ್ಮ ಇತಿಹಾಸ, ಪರಂಪರೆ, ಸಂಸ್ಕೃತಿಯನ್ನು ಸಾರುವ ಶ್ರದ್ಧಾ ಕೇಂದ್ರಗಳಾಗಿವೆ. ಸಾಂಸ್ಕೃತಿಕ ಶ್ರೀಮಂತಿಕೆ ಸಾರುವ ದೇವಸ್ಥಾನಗಳ ಸಂರಕ್ಷಣೆ ಮಾಡುವುದು, ವಿಶೇಷತೆ, ಇತಿಹಾಸ ಪ್ರಚುರಪಡಿಸುವ ಪ್ರಾಚ್ಯವಸ್ತು ಇಲಾಖೆಯ ಕಾರ್ಯಕ್ಕೆ ವಿದ್ಯಾರ್ಥಿಗಳು ಕೈ ಜೋಡಿಸಬೇಕು ಎಂದರು.



ದೇವಸ್ಥಾನ ಕಮಿಟಿ ಕೋಶಾಧ್ಯಕ್ಷ ಚನ್ನಪ್ಪ ಜಗಲಿ ಮಾತನಾಡಿ, ಐತಿಹಾಸಿಕ ಸ್ಮಾರಕಗಳ ಸ್ಥಳಗಳಲ್ಲಿ ಪ್ರಾಚ್ಯ ಪ್ರಜ್ಞೆ ಕಾರ್ಯಕ್ರಮ ಆಯೋಜಿಸಿ ಶಾಲಾ ಮಕ್ಕಳಿಗೆ ಗತಕಾಲದ ಸ್ಮಾರಕಗಳ ವೈಭವದ ಬಗ್ಗೆ ತಿಳುವಳಿಕೆ ನೀಡುವ ಕಾರ್ಯಕ್ರಮ ಆಯೋಜಿಸಿದ ಶಿಕ್ಷಣ ಇಲಾಖೆಯ ಕಾರ್ಯ ಶ್ಲಾಘನೀಯ ಎಂದರು.

ಬಿಇಓ ಜಿ.ಎಮ್. ಮುಂದಿನಮನಿ ಮಾತನಾಡಿದರು. ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಎಂ.ಬಿ. ಹೊಸಮನಿ, ಡಿಡಿಪಿಐ ಕಚೇರಿಯ ಎಪಿಸಿಓ ಎಸ್.ಕೆ. ಹವಾಲ್ದಾರ್, ಸುರೇಶ ರಾಚನಾಯಕರ, ಎಚ್. ಎಮ್. ಗುತ್ತಲ, ಪ್ರಕಾಶ ಪಿ, ಎಸ್.ಡಿ. ಲಮಾಣಿ, ಎಲ್.ಎ. ನಡುವಿನಮನಿ, ಎನ್.ಆರ್. ಸಾತಪುತೆ, ನಿಂಗಪ್ಪ ಗೊರವರ, ಕಸಾಪ ತಾಲೂಕಾಧ್ಯಕ್ಷ ಈಶ್ವರ ಮೆಡ್ಲೇರಿ, ಜಿ.ಎಸ್. ಗುಡಗೇರಿ, ಹರೀಶ ಎಸ್, ಉಮೇಶ ಹುಚ್ಚಯ್ಯನಮಠ, ಬಿ.ಎಮ್. ಯರಗುಪ್ಪಿ, ಆರ್.ಮಹಾಂತೇಶ, ಸಿ.ವಿ. ವಡಕಣ್ಣವರ, ರಾಜು ಉಮಚಗಿ, ಜ್ಯೋತಿ ಗಾಯಕವಾಡ ಇದ್ದರು. ಸಿಆರ್‌ಪಿಗಳಾದ ಉಮೇಶ್ ನೇಕಾರ, ಸತೀಶ ಬೋಮಲೆ ಕಾರ್ಯಕ್ರಮ ನಿರ್ವಹಿಸಿದರು.

ಶಿರಹಟ್ಟಿ/ಲಕ್ಷ್ಮೇಶ್ವರ ತಾಲೂಕುಗಳ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಪ್ರಬಂಧ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆ, ಭಾಷಣ ಸ್ಪರ್ಧೆಗಳಲ್ಲಿ 95 ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಸ್ಪರ್ಧಾ ವಿಜೇತರು

ಚಿತ್ರಕಲಾ ಸ್ಪರ್ಧೆಯಲ್ಲಿ ವಿಕಾಸ ಗುಡಿಮನಿ–ಪ್ರಥಮ, ಪ್ರದೀಪ ಹರಿಜನ–ದ್ವಿತೀಯ, ಮಹಮ್ಮದ್ ಹನೀಫ್–ತೃತೀಯ. ಪ್ರಬಂಧ ಸ್ಪರ್ಧೆಯಲ್ಲಿ ಕೋಳಿವಾಡ ಚನ್ನಮ್ಮ–ಪ್ರಥಮ, ರಚಿತಾ ಸಂಶಿ–ದ್ವಿತೀಯ, ಪುಷ್ಪಾ ರಣತೂರ–ತೃತೀಯ, ಭಾಷಣ ಸ್ಪರ್ಧೆಯಲ್ಲಿ ರಕ್ಷಿತಾ ಸಂಗನಪೇಟ–ಪ್ರಥಮ, ಹರ್ಷಿತಾ ಗಡ್ಡದೇವರಮಠ ದ್ವಿತೀಯ, ಸ್ನೇಹ ಕರ್ಜಗಿ ತೃತೀಯ, ರಸಪ್ರಶ್ನೆಯಲ್ಲಿ ಸರ್ಕಾರಿ ಪ್ರೌಢಶಾಲೆ ಗೊಜನೂರು–ಪ್ರಥಮ, ಸರ್ಕಾರಿ ಪ್ರೌಢಶಾಲೆ ಪು.ಬಡ್ನಿ–ದ್ವಿತೀಯ ಸ್ಥಾನ ಪಡೆದರು.

# ರೋಟರಿ ಸಂಸ್ಥೆಯಿಂದ ಕಲಿಕಾ ಸಾಮಗ್ರಿ ವಿತರಣೆ




■ವಿಜಯಸಾಕ್ಷಿ ಸುದ್ದಿ, ಗದಗ

ರೋಟರಿ ಕ್ಲಬ್ ಗದಗ–ಬೆಟಗೇರಿ ವತಿಯಿಂದ ಸರ್ಕಾರಿ ಪ್ರಾಥಮಿಕ ಶಾಲೆ ಹಾತಲಗೇರಿಯಲ್ಲಿ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು.

ಸಂಸ್ಥೆಯ ಅಧ್ಯಕ್ಷ ರೊ. ಚಂದ್ರಮೌಳಿ ಜಾಲಿಯವರು ಮಕ್ಕಳಿಗೆ ಕಲಿಕಾ ಸಾಮಗ್ರಿಗಳನ್ನು ವಿತರಿಸಿ, ಎಲ್ಲ ವಿದ್ಯಾರ್ಥಿಗಳೂ ಚೆನ್ನಾಗಿ ಓದಿ ತಮ್ಮ ಗ್ರಾಮದ ಹಾಗೂ ಪಾಲಕರ ಹೆಸರನ್ನು ಗುರುತಿಸುವಂತಾಗಲಿ ಎಂದು ಹಾರೈಸಿದರು. ಸಾಮಗ್ರಿಗಳ ಪ್ರಾಯೋಜಕತ್ವವನ್ನು ವಿನೋದ ಸ್ಟೋರ್ ಮಾಲಕರಾದ ವಿನೋದ ಮೊಹತ ವಹಿಸಿಕೊಂಡಿದ್ದರು. ಶಾಲೆಯ ಮುಖ್ಯೋಪಾಧ್ಯಾಯೆ ಎಸ್.ಹೆಚ್. ಬೆಂಗಿಯವರು ಸರ್ವರನ್ನು ಸ್ವಾಗತಿಸಿದರು.

ಕಾರ್ಯದರ್ಶಿ ರೊ. ವೀಣಾ ತಿರ್ಲಾಪೂರ, ರೊ. ಶ್ರೀಧರ ಸುಲ್ತಾನಪೂರ, ರೊ. ಶಿವಾಚಾರ್ಯ ಹೊಸಳ್ಳಿಮಠ, ರೊ. ಡಾ. ಕಮಲಾಕ್ಷಿ ಅಂಗಡಿ, ಶಿಕ್ಷಕರಾದ ಎನ್.ಎಮ್. ಕಾಳಗಿ, ವ್ಹಿ.ಸಿ. ಪಾಟೀಲ, ಎಲ್. ಎಸ್. ಮಾಳಗಿ, ಎಸ್.ಜೆ. ಖಾನಾಪೂರ, ವ್ಹಿ.ಟಿ. ತಮಿನಾಳ, ಎಸ್.ವ್ಹಿ. ಜಕ್ಕನಗೌಡರ, ಎಸ್. ಹೆಚ್. ಸುಣಗಾರ, ಎಸ್. ಎನ್. ಅಂಕಲಿ, ಸಿ.ಎಸ್. ಕರಿ, ಸರೋಜಿನಿ ಮಾದನೂರ, ಕೆ.ಎಸ್. ಸೊಂಟಿ, ಎಮ್.ಆರ್. ಕಲ್ಗುಡಿ, ಹೆಚ್.ಡಿ. ಕುರಿ ಮುಂತಾದವರು ಉಪಸ್ಥಿತರಿದ್ದರು.



■ವಿಜಯಸಾಕ್ಷಿ ಸುದ್ದಿ, ಧಾರವಾಡ

ನಗರದ ಸರಕಾರಿ ಪದವಿಪೂರ್ವ ಕಾಲೇಜು ಹಾಗೂ ಜಿಲ್ಲಾ ಪಂಚಾಯತ್ ಸಹಯೋಗದಲ್ಲಿ ಆರ್.ಎನ್. ಶೆಟ್ಟಿ ಕ್ರೀಡಾಂಗಣ ಹತ್ತಿರದ ಕಾಲೇಜು ಆವರಣದಲ್ಲಿ ಗುರುವಾರ ಬೆಳಿಗ್ಗೆ ಮತದಾನ ಜಾಗೃತಿ ಅಭಿಯಾನದಡಿ ಸಹಿ ಅಂದೋಲನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಜಿ.ಪಂ ಅಧಿಕಾರಿಗಳು, ಪ.ಪೂ.ಶಿ.ಇಲಾಖೆ ಅಧಿಕಾರಿಗಳು, ಉಪನ್ಯಾಸಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.


ಕರ್ನಾಟಕ ಸರಕಾರ

**ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ**

ದೂರವಾಣಿ / ಫ್ಯಾಕ್ಸ್ ಸಂಖ್ಯೆ : 08372–297213

ಇ–ಮೇಲ್: dsgadag@gmail.com

ಸಂಖ್ಯೆ: ಗವೈವಿಸಂ/ಟೆಂಡರ್/ಸ್ಟೇಷನರಿ/20/2023–24 ದಿನಾಂಕ:03.01.2024

**ಇ–ಟೆಂಡರ ಪ್ರಕಟಣೆ**

ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ ಆಸ್ಪತ್ರೆ ಗದಗ ಇಲ್ಲಿಗೆ ಅಂದಾಜು ಮೊತ್ತ ರೂ. **28** ಲಕ್ಷಗಳ ಮೊತ್ತದ ಸ್ಟೇಷನರಿ ಹಾಗೂ ಇತರೆ ಸಾಮಗ್ರಿಗಳ ಸರಬರಾಜಿಗಾಗಿ ಆಸಕ್ತಿಯುಳ್ಳ ಅಧಿಕೃತ ಮಾರಾಟಗಾರರಿಂದ ಹಾಗೂ ಸಂಘ–ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ ಕರೆಯಲಾಗಿದ್ದು, ದಿನಾಂಕ : **04.01.2024** ರಿಂದ ದಿನಾಂಕ : **19.01.2024** ರ ಸಾಯಂಕಾಲ 4:30 ಗಂಟೆವರೆಗೆ ಇ–ಪೋರ್ಟಲ್ ಸಂಖ್ಯೆ : **DME/2023-24/IND0426(https://kppp.karnataka.gov.in)**ನಲ್ಲಿ ಟೆಂಡರ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ತವ್ಯದ ದಿನಗಳಲ್ಲಿ ಕೆಳಗಡೆ ಸಹಿ ಮಾಡಿದವರ ಕಛೇರಿಗೆ ಸಂಪರ್ಕಿಸಬಹುದು.

**ಸಹಿ/– ನಿರ್ದೇಶಕರು, ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ**

ವಾಸಾಸಂಇ/ಗದಗ/ಕೆಎಸ್‌ಎಂಸಿಎ/428/2023–24


VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka